ಜೋಗಿ ಪುರುಷರು

ಕುದ್ಕಾಡಿ ವಿಶ್ವನಾಥ ರೈ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
[illegible]

ಮಕ್ಕಳಿಗಾಗಿ ತುಳುಕತೆಗಳು

ಕನ್ನಡ : 'ಮಕ್ಕಳಿಗಾಗಿ ಕತೆಗಳು' ಮಾಲಿಕೆಯಲ್ಲಿ
ಜೋಗಿ ಪುರುಷೆರ್ - ಕುದ್ಕಾಡಿ ವಿಶ್ವನಾಥ ರೈ ಅವರಿಂದ
ವಿಶ್ವನಾಥ ಕಲಾನಿಕೇತನ, ಪುತ್ತೂರು - 574313.
ಪ್ರಸರಣ - ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಂಗಳೂರು.

ಮುದ್ರಣ	:	2007
ಬೆಲೆ	:	ರೂ. 25
ಪುಟಗಳು	:	28
ಪ್ರಧಾನ ಸಂಪಾದಕ	:	ಯಮ್. ಕೆ. ಸೀತಾರಾಮ್ ಕುಲಾಲ್ ಅಧ್ಯಕ್ಷರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಪ್ರಕಾಶಕರು	:	ಎಸ್. ಎಚ್. ಶಿವರುದ್ರಪ್ಪ ರಿಜಿಸ್ಟ್ರಾರ್ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮಹಾನಗರ ಪಾಲಿಕೆ ಕಟ್ಟಡ, ಲಾಲ್‌ಬಾಗ್, ಮಂಗಳೂರು - 3. ದೂರವಾಣಿ / ಫ್ಯಾಕ್ಸ್ : 0824- 2459389 Email: tuluacademy@yahoo.co.in
ಹಕ್ಕುಗಳು	:	ಅಕಾಡೆಮಿ
ಮುದ್ರಣ	:	ಅರುಣಾ ಪ್ರಿಂಟರ್ಸ್ ಕುದ್ರೋಳಿ, ಮಂಗಳೂರು - 575 003. Ph : 0824 - 2494925

ಮಕ್ಕಳಿಗಾಗಿ ಕತೆಗಳು - ೨

ಮಕ್ಕಳಿಗಾಗಿ ಕತೆ

ಜೋಗಿ ಪುರುಷರು

ಕುದ್ಕಾಡಿ ವಿಶ್ವನಾಥ ರೈ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ
ಮಹಾನಗರ ಪಾಲಿಕೆ ಕಟ್ಟಡ, ಲಾಲ್‌ಬಾಗ್, ಮಂಗಳೂರು - 575003.
ದೂರವಾಣಿ / ಫ್ಯಾಕ್ಸ್ : 0824- 2459389
Email: tuluacademy@yahoo.co.in

ಅಧ್ಯಕ್ಷರ ಮೊದಲ ಮಾತು

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಈ ಹಿಂದೆ ಅಚ್ಚು ಹಾಕಿಸಿದ, ಪ್ರಚಾರದಲ್ಲಿರುವ ಕೆಲವೊಂದು ಮಕ್ಕಳ ಕತೆಗಳನ್ನು ಈ ಬಾರಿ ಕನ್ನಡ ಭಾಷೆಗೆ ಅನುವಾದಿಸಿದೆ. ನಮ್ಮ ಹಿರಿಯರು ಮಕ್ಕಳಿಗೆ ಹೇಳುತ್ತಿದ್ದ, ವಾಡಿಕೆಯಲ್ಲಿ "ಅಜ್ಜಿ ಕತೆಗಳು" ಎಂದು ಕರೆಯಲ್ಪಡುವ ಸಣ್ಣ ಸಣ್ಣ ಕತೆಗಳು ಈಗ ತುಳು ಭಾಷೆಯಲ್ಲಿದ್ದು, ಅದನ್ನು ಕನ್ನಡಕ್ಕೆ ಅನುವಾದ ಮಾಡಲಾಗಿದೆ. ಭಾಷೆಯು ಮೌಖಿಕ ಸಾಹಿತ್ಯದಲ್ಲಿ ಸಾಕಷ್ಟು ಪ್ರಚಾರಗೊಂಡಿದ್ದು, ಹಾಗೂ **1998**ನೇ ಇಸವಿಯಲ್ಲಿ ತುಳು ಭಾಷೆಯಲ್ಲಿ ಅಕಾಡೆಮಿಯು ಅಚ್ಚುಪಡಿಸಿದ ಪುಸ್ತಕಗಳಲ್ಲಿ ಆರನ್ನು ಆಯ್ದು ಕನ್ನಡಕ್ಕೆ ಭಾಷಾಂತರಿಸಲಾಗಿದೆ. ತುಳುವಿನ 'ಜೋಗಿ ಪುರುಷೆರ್' ಕತೆ ಕನ್ನಡದಲ್ಲಿ **"ಜೋಗಿ ಪುರುಷರು"** ಎಂಬ ಹೆಸರಿನಿಂದ ಅಚ್ಚಾಗಿ ಮಕ್ಕಳ ಕೈ ಸೇರುತ್ತಿದೆ.

ತುಳು ಭಾಷೆಯ ಮಕ್ಕಳ ಸಾಹಿತ್ಯ ಕನ್ನಡ ಭಾಷೆಯಲ್ಲೇ ವಿರಳವಾಗಿರುವಾಗ, ತುಳುವಿನಲ್ಲಿ ದೊರೆಯುವುದು ಅಸಾಧ್ಯ. ಈ ಕಾರಣದಿಂದ ಆಯ್ದ ಆರು ಪುಸ್ತಕಗಳು ಮಕ್ಕಳ ಅನುಕೂಲಕ್ಕಾಗಿ ತುಳುವಿನ ಬಗ್ಗೆ ಅಭಿಮಾನ, ಗೌರವ ಮೂಡಿಸಲಿಕ್ಕಾಗಿ ಕನ್ನಡಕ್ಕೆ ಅನುವಾದಗೊಂಡು ಹೊರತರಲಾಗಿದೆ.

ಈ ಆರು ಕತೆಗಳು ಒಂದೊಂದು ರೀತಿಯ ಅಜ್ಜಿ ಕತೆಗಳಾದರೂ, ಮಕ್ಕಳಿಗೆ ನೀತಿ ಪಾಠದ ಅರಿವು ಮೂಡಿಸುತ್ತದೆ. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ದಿ. ಅ. ಬಾಲಕೃಷ್ಣ ಶೆಟ್ಟಿ ಪೊಳಲಿಯವರ ಅವಧಿಯಲ್ಲೇ ಲೇಖಕರಿಂದಲೇ ಭಾಷಾಂತರ (ಅನುವಾದ)ಗೊಂಡು ಹಸ್ತಪ್ರತಿಗಳಾಗಿ ಉಳಿದುಕೊಂಡ, ಈ ಕೃತಿಗಳು ಈ ಅವಧಿಯಲ್ಲಿ ಅಚ್ಚಾಗುತ್ತಿರುವುದು ನಿಜವಾಗಿಯೂ ಅಕಾಡೆಮಿಗೆ ಹೆಮ್ಮೆಯ ವಿಷಯವಾಗಿದೆ.

ಈ ಕೃತಿಯನ್ನು ತುಳುವಿನಲ್ಲಿ ಬರೆದು, ಈಗ ಮತ್ತೆ ಪುನಃ ಕನ್ನಡಕ್ಕೆ ಅನುವಾದಗೊಳಿಸಿದ ಶ್ರೀ ಕುದ್ಕಾಡಿ ವಿಶ್ವನಾಥ ರೈ ಇವರಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳು. ಈ ಪುಸ್ತಕವನ್ನು ಚೆಲುವಾದ ಮುಖ ಪುಟದೊಂದಿಗೆ ಅಚ್ಚು ಮಾಡಿದ ಅರುಣ ಪ್ರಿಂಟರ್ಸ್ ಮಾಲೀಕರಾದ ಶ್ರೀ ಎಚ್. ಪ್ರಸನ್ನಕುಮಾರ್ ಇವರಿಗೆ ಕೂಡ ಕೃತಜ್ಞತೆಗಳು.

ಮಂಗಳೂರು
18-7-2007

ಯಮ್. ಕೆ. ಸೀತಾರಾಮ್ ಕುಲಾಲ್
ಅಧ್ಯಕ್ಷರು

ಜೋಗಿ ಪುರುಷರು

ಕೌರವರಿಗೂ ಪಾಂಡವರಿಗೂ ಪಗಡೆಯಾಟ ಜರಗಿತು. ಪಾಂಡವರಿಗೆ ಸೋಲಾಗಿ ಹನ್ನೆರಡು ವರುಷ ವನವಾಸ ಮಾಡಿದರು. ಒಂದು ವರ್ಷದ ಅಜ್ಞಾತವಾಸ ಕಳೆಯಲು ವಿರಾಟ ರಾಜನ ರಾಜ್ಯಕ್ಕೆ ಬಂದರು. ಬ್ರಾಹ್ಮಣರ ವೇಷದಲ್ಲಿ ಬಂದು ತಮಗೆ ಕೆಲಸ ಕೊಡಬೇಕೆಂದು ಕೇಳಿದರು.

ವಿರಾಟರಾಯ ಹೇಳಿದ "ನಮಗೆ ಕೆಲಸಕ್ಕೆ ಜನವೇ ಸಿಗುವುದಿಲ್ಲ. ನೀವು ದುಡಿಯುವಷ್ಟು ಕೆಲಸ ಇದೆ" ಎಂದು. ಧರ್ಮರಾಯನಿಗೆ ಶಿಕ್ಷಣ ನೀಡುವ ಐಗಳ ಕೆಲಸ ಕೊಟ್ಟ. ಭೀಮನಿಗೆ ಅಡುಗೆ ಅರಗಣಿ ಮಾಡುವ ಕೆಲಸ. ಅರ್ಜುನನಿಗೆ ಬಾಳೆಯ ತೋಟ ಕಾಯುವ ಕೆಲಸ ಮತ್ತು ನರ್ತನ ಕಲಿಸುವ ಕೆಲಸ. ನಕುಲ ಸಹದೇವರಿಗೆ ದನ ಮೇಯಿಸುವ ಕೆಲಸ. ದ್ರೌಪದಿ ಕನ್ಯೆಗೆ ಹೂವಿನ ಹಿತ್ತಲಿಗೆ ನೀರು ಹೊಯ್ಯುವ ಕೆಲಸ ಕೊಟ್ಟನು.

ತೋಡಿದ ಬಾವಿಯ ಬಳಿ ಹಾಕಿದ ಏತವಿತ್ತು. ಅಡಿ ಪಾತಾಳದಲ್ಲಿದ್ದ ನೀರನ್ನು ಪನೆಯಲ್ಲಿ ನಿಂತು ದ್ರೌಪದಿ ಸೇದಿ ಹಾಕುತ್ತಿದ್ದಳು. ಹಾಗಿರುವಾಗ ಅರ್ವತ್ತ ಆರು ಗರಡಿಯ ಕೀಚಕ ಅರಸು ಈಂದ್ ಈಚಲು ಮೂರ್ತೆಗೆ ಬರುತ್ತಾನೆ. ಬೆಳ್ಳಿಯ ತರ್ಕತ್ತಿ ಬಂಗಾರದ ಅಂಡೆಯನ್ನು ಹಿಡಿದುಕೊಂಡು ಬರುತ್ತಾನೆ. ಬಂದು ಮೂರ್ತೆ ಮೂಡುತ್ತ ಇರುವಾಗ ಆಕಾಶ ಅರಳಿತು, ಭೂಮಿ ಪ್ರಕಾಶವಾಯಿತು. ಆಶ್ಚರ್ಯದಲ್ಲಿ ನಾಲ್ಕು ದಿಕ್ಕು ನಾಲ್ಕು ಊರು ನೋಡಿದ. ಕೆಳಗೆ ನೋಡಿದಾಗ ಸಿಡಿಲು ಮಿಂಚು ಹೊಳೆದಂತಾಯಿತು.

ಕನ್ಯೆ ದ್ರೌಪದಿ ನೀರು ಹನಿಸುವುದನ್ನು ನೋಡಿದನು. ಅಂದವನ್ನು ಕಂಡು ದರ್‍ರೆಂದು ಜಾರಿ ಕೆಳಗೆ ಬಂದನು. ಅಡ್ಡ ಕಟ್ಟಿ ನಿಂತು ಕೇಳಿದನು. "ಹೆಣ್ಣೇ, ನಿನ್ನ ತಾಯಿ ತಂದೆ ಯಾರು?"

"ನೀನು ಎಲ್ಲಿಯವಳು?"

"ಈಗ ಇರುವುದು ಎಲ್ಲಿ?"

"ಕೀಚಕರಸು, ನೀನು ಮೂರ್ತೆಗೆ ಬಂದವನು.

ಮೂರ್ತೆ ಮಾಡಿಕೊಂಡು ಹೋಗು. ನನ್ನ ತಾಯಿ ತಂದೆಯ ಸುದ್ದಿ ಬೇಡ ನಿನಗೆ. ನಾನು ಎಲ್ಲಿದ್ದರೆ ನಿನಗೇನು?" ಎಂದು ಹೇಳಿದಳು.

ಅದಕ್ಕೆ "ನಾಳೆ ಮಂಗಳವಾರ ಅಲ್ಲ ಮೇಗಿನ ಮಂಗಳವಾರ ನನ್ನ ಸಾಧನೆಯ ಗರಡಿಗೆ ಬರಬೇಕು. ಬರುವುದಿದ್ದರೆ ಬರುತ್ತೇನೆಂದು ಹೇಳು. ಬರುವುದಿಲ್ಲವಾದರೆ ಬರುವುದಿಲ್ಲ ಎಂದು ಹೇಳು" ಎಂದ.

"ಯಾರ ಸುದ್ದಿಗೆ ಹೋಗುವುದಿದ್ದರೂ ಹೋಗು. ನನ್ನ ಸುದ್ದಿಗೆ ಬರಬೇಡ. ನನ್ನ ಸುದ್ದಿ ಪಂಚ ಪಾಂಡವರ ಸುದ್ದಿ ನಿನಗೆ ಬೇಡ. ಸುಟ್ಟು ಸೂಕ್ತರ ಆದೀತು! ನನ್ನ ಮೇಲೆ ಕಯ್ ಮಾಡಿದವ ಇಷ್ಟರ ತನಕ ಭೂಮಿಯ ಮೇಲೆ ಇಲ್ಲ. ಇನ್ನು ಹುಟ್ಟಲಿಕ್ಕೂ ಇಲ್ಲ ನೋಡು" ಎನ್ನುವಾಗ ....

"ಬರುವುದಿದ್ದರೆ ಬರುತ್ತೇನೆ ಎಂದು ಹೇಳು. ಬರುವುದಿಲ್ಲ ಎಂದಾದರೆ ಬೆಳ್ಳಿ ತರ್ಕತ್ತಿಯಲ್ಲಿ ಮೂರು ತುಂಡು ಮಾಡದೆ ಬಿಡಲಾರೆ" ಎಂದ. ಹೆಣ್ಣು ಹೆಂಗಸು ಹೆದರಿ ಬರುತ್ತೇನೆ ಎಂದಳು.

"ಬಾಯಿ ಮಾತಿನಲ್ಲಿ ನೀನು ಬರುತ್ತೇನೆಂದರೆ ಸಾಲದು. ಕಯ್ ತಟ್ಟಿ ಕಯ್ ಭಾಷೆ ಕೊಡಬೇಕು. ನೆಲ ಮುಟ್ಟಿ ಭೂಮಿ ಸಾಕ್ಷಿ ಕೊಡಬೇಕು. ಮೇಲೆ ನೋಡಿ ನಾರಾಯಣ ದೇವರ ಸಾಕ್ಷಿ ಕೊಡಬೇಕು. ಮರಕ್ಕೆ ಗಡಿ ಇಡಬೇಕು" ಎಂದ.

ಮರಕ್ಕೆ ಗಡಿ ಇಟ್ಟಳು. ಕಯ್ ತಟ್ಟಿ ಕಯ್ ಭಾಷೆ ಕೊಟ್ಟಳು. ಭೂಮಿ ಮುಟ್ಟಿ ಭೂಮಿ ಸಾಕ್ಷಿ ಕೊಟ್ಟಳು. ಮೇಲೆ ನೋಡಿ ಸೂರ್ಯ ನಾರಾಯಣ ದೇವರ ಸಾಕ್ಷಿ ಕೊಟ್ಟಳು. ಒಂದು ಕೊಡ ನೀರು ಎತ್ತಿಕೊಂಡು ಹೂವಿನ ಹಿತ್ತಿಲಿಗೆ ಹೋದಳು. ಹೂವಿಗೆ ನೀರು ಹೊಯ್‌ದಳು. ಮನೆಗೆ ಹೋದಳು. ಕತ್ತಲೆ ಕೋಣೆಯಲ್ಲಿ ದುಕ್ಕದ ಕೋಣೆಯಲ್ಲಿ ಮಲಗಿದಳು. ಊಟಕ್ಕೆ ಏಳಲಿಲ್ಲ. ಹೂವಿನ ಹಿತ್ತಿಲಿಗೆ ನೀರು ಹಾಕಲು ಹೋಗಲಿಲ್ಲ.

ಧರ್ಮರಾಯರು ಬಂದರು. "ಹೆಣ್ಣೇ ಹೂವಿನ ಹಿತ್ತಿಲಿಗೆ ನೀರು ಹಾಕಲು ಹೋಗಲಿಲ್ಲ ಯಾಕೆ? ಯಾಕೆ ಉಣ್ಣಲು ಎದ್ದಿಲ್ಲ?" ಎಂದು ಕೇಳಿದರು.

"ಇಷ್ಟರ ತನಕ ನಿಮಗೆ ಐವರಿಗೆ ನಾನು ಒಬ್ಬಳು ಹೆಂಡತಿಯಾಗಿದ್ದೆ. ಇಂದು ನನಗೆ ಕೀಚಕನ

ಒಲೆಯ ಬೂದಿ ಗೋರುವ ಕಾಲ ಬಂತು" ಎಂದು ನಡೆದ ಸಂಗತಿಯನ್ನು ಹೇಳಿದಳು.

"ಕೀಚಕ ಅರಸು ಅಂದರೆ ಸಾಮಾನ್ಯ ಜನ ಅಲ್ಲ. ನೂರ ಒಂದು ಹೆಣ್ಣಾನೆಗಳ ತಾಕತ್ತು ಇದ್ದವ. ಅವನಿಗೆ ಎದುರಾಗಿ ನಿಲ್ಲಲು ನನ್ನಿಂದ ಆಗದು. ನನ್ನಲ್ಲಿ ಯಾಕೆ ಹೇಳುವುದು? ನನ್ನ ತಮ್ಮಂದಿರು ಇದ್ದಾರೆ. ಅವರಲ್ಲಿ ಹೋಗಿ ಹೇಳು" ಎಂದ.

ನಕುಲ ಸಹದೇವರಲ್ಲಿ ಹೇಳಿದಾಗ "ನಮ್ಮ ಅಣ್ಣಂದಿರು ಇದ್ದಾರೆ. ಅವರಲ್ಲಿ ಹೇಳು" ಅಂದರು. ಅರ್ಜುನನಲ್ಲಿ ಹೇಳಿದಾಗ ಅವ ಹೇಳುತ್ತಾನೆ "ನನ್ನಿಂದ ಆಗುವ ಕೆಲಸವಲ್ಲ. ನಮ್ಮ ಭೀಮಸೇನ ಇದ್ದಾನೆ. ಅವನಲ್ಲಿ ಹೇಳು. ನೂರ ಒಂದು ಆನೆಗಳ ಶಕ್ತಿ ಇದ್ದವ. ಅವನಲ್ಲಿ ಹೇಳಿದರೆ ನಿನ್ನ ಕಷ್ಟ ಪರಿಹಾರ ಆದೀತು" ಎಂದ.

"ಗಂಡು ಗಂಡಸು ನಿದ್ರೆಯಲ್ಲಿರುವಾಗ ಎಬ್ಬಿಸುವ ಉಪಾಯ ಹೇಗೆ ?"

"ನಾಗದರ್ಬೆ ಸಿರಿಗಿಂಡೆಯಲ್ಲಿ ನೀರು ತೆಗೆದುಕೊಂಡು ಹೋಗು. ಬಲಕಾಲಿನ ಮಿನ ಹೊಟ್ಟೆಗೆ ನೀರು ಹಾಕಿ ಎಬ್ಬಿಸು ಹೆಣ್ಣೆ" ಎಂದ.

ಸಿರಿ ಗಿಂಡೆಯಲ್ಲಿ ನೀರು ಹಿಡಿದುಕೊಂಡಳು. ನಾಗದರ್ಬೆ ಹಿಡಿದುಕೊಂಡಳು. ಬಲಕಾಲಿನ ಮಿನ ಪೊಟ್ಟೆಗೆ ನೀರು ಚಿಮುಕಿಸಿ ಎಬ್ಬಿಸಿದಳು.

ಭೀಮ ಎದ್ದು ಕುಳಿತಾಗ ಏಳು ಕೋಲು ನೆಲ ಅದುರಿತು. ನಾಲ್ಕು ದಿಕ್ಕಿಗೆ ನೋಡುವಾಗ ಕತ್ತಲೆಯಲ್ಲಿ ದ್ರೌಪದಿ ನಿಂತಿರುವುದನ್ನು ನೋಡಿದ. ಎದ್ದು ಜುಟ್ಟಿಗೆ ಒಂದು ಕಯ್ ಹಾಕಿದ. ಒಂದು ಕಯ್ಯಲ್ಲಿ ಪಾಂಡಲ ಕತ್ತಿ ಹಿಡಿದ. ದರ್ರನೆ ಎಳೆದುಕೊಂಡು ಬಂದ.

"ಇಷ್ಟೊಂದು ಮದ ಅಹಂಕಾರದ ಹೆಣ್ಣನ್ನು ಭೂಮಿಯ ಮೇಲೆ ಇಡಲಾರೆ" ಎಂದು ಪಾಂಡಲಕತ್ತಿ ಎತ್ತಿದ.

"ಗಂಡಸೇ! ಯಮ ಆದರು ಬಂದು ಮೂರು ಮಾತು ಕೇಳುವ ತನಕ ನಿಲ್ಲುತ್ತಾನೆ. ನಿಮಗೆ ಅಷ್ಟೂ ಪುರುಸೊತ್ತು ಇಲ್ಲವೇ?" ಎಂದಾಗ ಪಾಂಡಲ ಕತ್ತಿ ಕೆಳಗಿಟ್ಟ. ಜುಟ್ಟಿನ ಕಯ್ ಬಿಟ್ಟ. "ಹೆಣ್ಣೇ, ನಾವು ಐವರು ಪಾಂಡವರು ಇರುವಾಗ ನಿನಗೆ ಬಂದ ಕಷ್ಟ ಏನು ಹೇಳು" ಎಂದಾಗ, ನಡೆದ ಸಂಗತಿ ಹೇಳಿದಳು.

"ಇಷ್ಟರ ತನಕ ಐವರಿಗೆ ನಾನು ಒಬ್ಬಳಾದರೂ ಇದ್ದೆ. ಇಂದು ಕೀಚಕ ಅರಸನ ಒಲೆಯ ಬೂದಿ ತೆಗೆಯುವ ಕಾಲ ಬಂತು" ಎಂದಳು. ನಡೆದ ಸಂಗತಿ ಕೇಳಿ ಭೀಮ ಏಳೇಳು ಲೋಕದ ಕೋಪದಲ್ಲಿ

ಕೆಂಡವಾದ. ಭೂಮಿ ಆಕಾಶಕ್ಕೆ ಸಮನಾಗಿ ನಿಂತ. "ನೀವು ಹೋಗುವುದಿದ್ದರೆ ಹೋಗಿ. ಇಲ್ಲವಾದರೆ ನಿಮ್ಮ ಉಡುಗೆ ತೊಡುಗೆ ನನಗೆ ಕೊಡಿ ನಾನು ಹೋಗುತ್ತೇನೆ" ಎಂದಳು.

"ಹೆಣ್ಣೇ, ನಾವು ಐವರು ಪಾಂಡವರು ಇರುವಾಗ ನೀನು ಹೆಣ್ಣು ಹೆಂಗಸು ಯಾಕೆ ಹೋಗುವುದು? ನನ್ನ ತಲೆ ಬಾಚಿ ಕಟ್ಟು" ಎಂದ.

ಬೆಳ್ಳಿಯ ಬಾಚಣಿಗೆ ಹಿಡಿದುಕೊಂಡು ಬಂದಳು. ಎಣ್ಣೆಯ ಅರಿಯ ತಂದು ನೆತ್ತಿಗೆ ಎಣ್ಣೆ ಹಾಕಿ, ಜಡೆಗೊಂಡೆ ರಂಡೆ ಸೂಡಿ ಹಾಕಿದಳು. ಹಣೆಗೆ ಪನಿ ಕುಂಕುಮ ಇಟ್ಟಳು. ಕಣ್ಣಿಗೆ ಕೋಲ್‌ಮಯಿ ಎಳೆದಳು. ಪಟ್ಟೆ ಸೀರೆ ಉಡಿಸಿದಳು. ಪಟ್ಟೆ ರವಕೆ ಹಾಕಿದಳು. ಕಾಲಿಗೆ ಸಿರಿಗೆಜ್ಜೆ ಕಟ್ಟಿಸಿದಳು. ನೆತ್ತಿಗೆ ನೆತ್ತಿ ಬಗ್ತಲೆ ಇಟ್ಟಳು.

ಪಾಂಡಲ ಕತ್ತಿ ತೆಗೆದು ಸೊಂಟಕ್ಕೆ ಬಿಗಿದ. ಗದೆಯನ್ನು ತೆಗೆದು ಕಂಕುಳಲ್ಲಿ ಬಿಗಿದುಕೊಂಡ. ಅಷ್ಟು ಹೊತ್ತಿಗೆ ಹದಿನೆಂಟು ವರ್ಷದ ಹೆಣ್ಣಾಗಿ ಕಂಡ.

ಸರಿಯಾದ ಸಮಯಕ್ಕೆ ಹೊರಟು ಕೀಚಕನ ಸಾಧನೆಯ ಗರಡಿಗೆ ಹೋದ. ಕೀಚಕರಸು ಆನೆ ಬಾಗಿಲಲ್ಲಿ ನಂದಾದೀಪ ಇಟ್ಟು ದಾರಿ ಕಾಯುತ್ತಿದ್ದ. ಭೀಮ ತಗ್ಗಿ ಬಗ್ಗಿಕೊಂಡು ಹಿಂಬಾಗಿಲಿಗೆ ಹೋದ. ಒಳಗೆ ನುಗ್ಗಿದ.

"ಯಾರೇ ಹೆಣ್ಣು, ಆನೆ ಬಾಗಿಲಲ್ಲಿ ಬರುವುದು ಬಿಟ್ಟು ಕುರು ಬಾಗಿಲಲ್ಲಿ ಯಾಕೆ ಬಂದೆ? ನಿನಗೆ ಅಷ್ಟು ಹೆದರಿಕೆ ಏನು?" ಎಂದ.

"ನಿನ್ನ ಕಯ್ ಸೇರಿದ ಮೇಲೆ ನನಗೆ ಹೆದರಿಕೆ ಏನು?" ಎಂದಾಗ ಕೀಚಕರಸು ಓಡಿ ಹೋದ. ತೂಗು ಮಂಚದಲ್ಲಿ ಹೂವಿನ ಬಟ್ಟೆ ಹಾಸಿದ. "ಬಾರೇ ಹೆಣ್ಣೇ,ಬಾರೇ ಹೆಣ್ಣೇ" ಎಂದು ಕರೆದ.

"ಬರುವುದಿದ್ದರೆ ಬರಬಹುದು. ಕುಳಿತುಕೊಳ್ಳುವುದಿದ್ದರೆ ಕುಳಿತುಕೊಳ್ಳಬಹುದು. ನಾವು ಎರಡಾಟ ಚೆನ್ನೆ ಗೊಬ್ಬು ಪಗಡೆಯಾಟ ಆಡಬೇಕು".

"ಆಡುವುದಿದ್ದರೆ ಆಡಬಹುದು. ಗಂಡಸು ಸೋತರೆ ಸೋತಂತೆ ಆಗುವುದಿಲ್ಲ. ಗೆದ್ದರೆ ಗೆದ್ದಂತೆ ಆಗುವುದಿಲ್ಲ. ನಾಳೆ ನಾವು ಆಡುವ".

"ನಾಳೆಯದ್ದು ನಾಳೆ ಆಡಬೇಕು. ಇವತ್ತಿನದ್ದು ಇಂದು ಆಡಬೇಕು. ನಾಳೆಯ ಹಸಿವಿಗೆ ನಾಳೆಯೇ ಉಣ್ಣಬೇಕು. ಇಂದಿನ ಹಸಿವಿಗೆ ಇಂದೇ ಉಣ್ಣಬೇಕು" ಎಂದಾಗ ಕೀಚಕ ಅರಸು ಏಳೇಳು ಲೋಕದ

ಕೆಂಡ ಗರ್ವದಲ್ಲಿ ಓಡೋಡಿ ಹೋದ. ಕಲ್ಲ ಕಲೆಂಬಿಯ ಬಾಗಿಲು ತೆಗೆದು ಬೆಳ್ಳಿಯ ಚೆನ್ನೆಮನೆ ತೆಗೆದ. ಬಂಗಾರದ ಹರಳು ತಂದು ಕುಳಿತ.

ಒಂದು ಆಟದಲ್ಲಿ ದ್ರೌಪದಿಗೆ ಜಯವಾಯಿತು. ಎರಡನೇ ಆಟದಲ್ಲಿ ದ್ರೌಪದಿ ಗೆದ್ದಳು. ಮೂರನೇ ಆಟದಲ್ಲಿ ಕನ್ಯೆ ದ್ರೌಪದಿಗೆ ಜಯ ಲಭಿಸಿತು.

ಕೀಚಕ ಕೆಂಡ ಕೋಪದಲ್ಲಿ ದ್ರೌಪದಿಯನ್ನು ಎಳೆದು ಅಂಗಾತ ಮಾಡಿದನು. ಎದೆಗೆ ಕಯ್ ಹಾಕಿದ. "ಎಲೇ ಹೆಣ್ಣೇ ನಿನ್ನ ಎದೆ ಇಷ್ಟು ಗಟ್ಟಿಯಾಕಿದೆ?" ಎಂದ. "ಅಷ್ಟು ಗಟ್ಟಿ ಇಲ್ಲದಿದ್ದರೆ ಐದು ಮಂದಿಯನ್ನು ಸುಧಾರಿಸುವುದು ಹೇಗೆ?"

ಏಳು ರಾತ್ರೆ ಏಳು ಹಗಲು ಸಾಧನೆಯ ಗರಡಿ ಅದುರಿತು. ರಣರಂಗವೇ ಆಯಿತು. ಎಂಟನೆಯ ಸಮ ರಾತ್ರಿಯ ಹೊತ್ತಿಗೆ ಭೀಮ ಏಳು ಲೋಕದ ಕೆಂಡ ಕೋಪ ತಾಳಿದ. ಎಡದ ಕಾಲಿನ ಉಂಗುಷ್ಟದಲ್ಲಿ ಎತ್ತಿ ಕೀಚಕನನ್ನು ಮೇಲೆ ಹಾರಿಸಿದ. ಕೆಳಗೆ ಬೀಳಬೇಕಿದ್ದರೆ ಪಾಂಡಲ ಕತ್ತಿ ತೆಗೆದ. ಮೂರು ತುಂಡು ಮಾಡಿ ಹಾರಿಸಿದ.

"ನನ್ನ ಕುಲಕ್ಕೆ ಎರಡನೇ ಜಾತಿಯನ್ನು ಭೂಮಿಯ ಮೇಲೆ ಇಡಲಾರೆ. ಬಡಗು ದಿಕ್ಕಿನ ಮಾವೆರಿಗಂಗೆ, ತೆಂಕಿನ ತೆನ್‌ಕಾಯಿ ಗಂಗೆ, ಮೂಡು ದಿಕ್ಕಿನ ಮೂಡಾಯಿ ಗಂಗೆ, ಪಡು ದಿಕ್ಕಿನ ಮುಪ್ಪಿಗಂಗೆ, ಈ ನಾಲ್ಕು ಗಂಗೆಯ ಒಳಗೆ ಕೀಚಕನ ವಂಶವನ್ನು ಇಡಲಾರೆ". ಎಂದು ಹೊರಟು ಬರುತ್ತಾನೆ. ದ್ರೌಪದಿಯ ವೇಷವನ್ನು ದ್ರೌಪದಿಗೆ ಕೊಡುತ್ತಾನೆ.

ಗೋಲಿಯ ಮರ ಕಿತ್ತು ಭೀಮ ನೆರಳಿಗೆ ಹಿಡಕೊಂಡ. ಮಾವಿನ ಮರಕಿತ್ತು ಕೋದಂಟಿ ಮಾಡಿಕೊಂಡ. ಕೊಂಗರೆ ಹಲ್ಲು ಮಸೆಯುತ್ತ, ಕೆಂಚು ಮೀಸೆ ಕೆಂಗಣ್ಣು ತಿರುಗಿಸುತ್ತ ಬಂದ. ಭೂಮಿ ಭಾರದ ಗದೆಯನ್ನು ಹೆಗಲಲ್ಲಿ ಇಟ್ಟುಕೊಂಡು, ಪಾಂಡಲ ಕತ್ತಿ ಬೀಸುತ್ತ ಬಂದ.

ಧರ್ಮರಾಯ ಬಂದು ಅಡ್ಡ ನಿಂತ. "ಭೀಮ ಒಂದು ಕೋಪದಲ್ಲಿ ಬಾವಿಗೆ ಹಾರುವುದಲ್ಲ. ಮೇಲೆ ಬರಲು ಕಷ್ಟವಾದೀತು. ಕುಲದ ಮೇಲೆ ಎರಡು ಬಗೆಯಬೇಡ. ಜಾತಿಯ ಮೇಲೆ ಎರಡು ಬಗೆಯಬೇಡ. ಕೀಚಕನನ್ನು ಕೊಂದು ಚಿಂತೆ ಇಲ್ಲ" ಎಂದ.

"ಎಷ್ಟು ಮಾತ್ರಕ್ಕೂ ನಿಲ್ಲಲಾರೆ ನಾನು. ಕೀಚಕನ ವಂಶ ಭೂಮಿಯ ಮೇಲೆ ಇಡಲಾರೆ ನಾನು" ಎಂದು ಹೊರಟನು. ಮೂಡು ದಿಕ್ಕಿನಲ್ಲಿ ಮೂಡಿದ ಸಮುದ್ರದವರೆಗೆ ಸಂಹಾರ ಮಾಡುತ್ತ ಹೋದ. ಪಡು ದಿಕ್ಕಿನ ಉಪ್ಪಿನ ಗಂಗೆಯ ತನಕ ಸಂಹಾರ ಮಾಡುತ್ತ ಹೋದ. ತೆಂಕುದಿಕ್ಕಿನ ತೆಂಗಿನ ಗಂಗೆಯ ತನಕ ಸಂಹಾರ ಮಾಡುತ್ತ ಹೋದ.

ಹೀಗೆ ಚೇದನೆ ಮಾಡುತ್ತ ಒಂದಾನೊಂದು ಊರಿಗೆ ಬಂದ. ಸುತ್ತು ಮದ್‌ಲಿನ ಒಂದು ಮನೆಯ ಮುಂದೆ ಇಬ್ಬರು ಮಕ್ಕಳಿದ್ದರು. ಆ ಎರಡು ಅಣ್ಣ ತಂಗಿ ಮಕ್ಕಳು ಉಳಿದಿದ್ದವು. ಭೀಮ ಆನೆ ಬಾಗಿಲಲ್ಲಿ ಹೋಗಿ ನಿಂತನು. ಮೂರು ಸರ್ತಿ ಅರ್ಭಟಿಸಿದ. ಮಕ್ಕಳು ಹಿಂಬಾಗಿಲಲ್ಲಿ ತಪ್ಪಿಸಿ ಓಡಿಕೊಂಡು ಹೋದರು. ಕಾಶಿ ಯಾತ್ರೆಗೆ ಹೋಗುವ ಹೆದ್ದಾರಿ ಹಿಡಿದರು. ಕಾಡು ದಾರಿಯಲ್ಲಿ ಬೀಳುತ್ತಾ ಏಳುತ್ತಾ, ಅಳುತ್ತಾ ಓಡುತ್ತಾ ಮುಂದೆ ಹೋದರು.

ಎದುರಿಗೆ ಕದ್ರಿ ಸ್ಥಳದ ಅಯ್ಯರು, ಯೋಗಿ ಪುರುಷರು ಬರುತ್ತಾರೆ. ಬಡಗು ಗಂಗೆಯಲ್ಲಿ ಸ್ನಾನ ಮಾಡಿ ಬರುತ್ತಾರೆ. ಕಾಶಿ, ರಾಮೇಶ್ವರ, ಕನ್ಯಾಕುಮಾರಿಯಲ್ಲಿ ತೀರ್ಥ ಸ್ನಾನ ಮಾಡಿಕೊಂಡು ಬರುತ್ತಾರೆ. ಏಳು ಗಂಗೆಯಲ್ಲಿ ಸ್ನಾನ ಜಪ ಮಾಡಿಕೊಂಡು ಕದ್ರಿ ಸ್ಥಳದ ಪುರುಷರು ಮುಂದೆ ದಾಟಿ ಹೋದರು. ಹಿಂದಿನಿಂದ ಮಕ್ಕಳು ಅಳುವ ದನಿ ಕೇಳುತ್ತದೆ. ಪುರುಷರು ಹಿಂದೆ ತಿರುಗಿ ನೋಡಿದರು. ಹಿಂತಿರುಗಿ ನೋಡುವಾಗ ಎರಡು ಅಣ್ಣ ತಂಗಿ ಮಕ್ಕಳು. ಇಬ್ಬರು ಅಣ್ಣ ತಂಗಿ ಮಕ್ಕಳು ಓಡಿಕೊಂಡು ಬರುವುದನ್ನು ನೋಡಿದರು. ಮಕ್ಕಳು ಪುರುಷರ ಕೊಡಿ ತಲೆ ನೋಡಿದರು. ಓಡಿಕೊಂಡು ಬಂದು ಗಂಡು ಬಲ ಬದಿಯಲ್ಲಿ ನಿಂತ. ಹೆಣ್ಣು ಎಡ ಬದಿಯಲ್ಲಿ ನಿಂತಳು. ಕಾಲಿಗೆ ಉದ್ದಂಡ ಬಿದ್ದರು.

ಹಿರಿಯ ಅಯ್ಯ ಮಕ್ಕಳನ್ನು ಎತ್ತಿಕೊಂಡರು. ಕಣ್ಣ ನೀರನ್ನು ಒರಸಿದರು. ಮುದ್ದಾಡಿದರು. "ಚಿಕ್ಕ ಪ್ರಾಯದ ಮಕ್ಕಳು ನೀವು. ಯಾವ ಕುಲದ ಮಕ್ಕಳು. ನಿಮಗೆ ಯಾವ ಕಷ್ಟ ಬಂತು?" ಎಂದು ಕೇಳಿದರು.

" ಅಂದು ನಾವು ನಮ್ಮ ತಾಯಿ ತಂದೆಯ ಬಸುರಲ್ಲಿ ಹುಟ್ಟಿದೆವು. ಇಂದು ನಿಮ್ಮ ಹೊಟ್ಟೆಯಲ್ಲಿ ಹುಟ್ಟಿದ್ದೇವೆ. ನಮ್ಮ ಜೀವವನ್ನು ಉಳಿಸಿರಿ. ನಮ್ಮ ಕುಲವನ್ನು ಭೂಮಿಯ ಮೇಲೆ ಉಳಿಸಿರಿ" ಎಂದು ಕೇಳಿಕೊಂಡರು.

ಹೆಗಲಿಗೆ ಹಾಕಿದ ಮೂವತ್ತು ಮೋಳದ ಕೋಲು ಕಂಬಿ ದೋತ್ರ ತೆಗೆದರು. ಕೋಲು ಕಂಬಿ ದೋತ್ರವನ್ನು ಎರಡು ತುಂಡು ಮಾಡಿದರು. ಎರಡು ತುಂಡಿನಲ್ಲಿ ಎರಡು ಜೋಲಿಗೆ ಮಾಡಿದರು. ಗಂಡನ್ನು ಬಲದ ಜೋಲಿಗೆಯಲ್ಲಿ ಕುಳ್ಳಿರಿಸಿದರು. ಹೆಣ್ಣನ್ನು ಎಡದ ಜೋಲಿಗೆಯಲ್ಲಿ ಕುಳ್ಳಿರಿಸಿದರು. ಹತ್ತು ಹೆಜ್ಜೆ ಹದಿನಾರು ಜಾಮ ಹೋಗುವಾಗ ಭೀಮ ಓಡಿಕೊಂಡು ಬರುತ್ತಾನೆ.

ಭೀಮ ಓಡಿಕೊಂಡು ಬರುವಾಗ ಅಡ್ಡ ಬೇರು ತುಂಡಾಗುತ್ತದೆ. ಗುಂಡು ಕಲ್ಲು ಪುಡಿಯಾಗುತ್ತದೆ. ಕಾಲಿನ ಮಣ್ಣು ತಲೆಗೆ ಆಯ್ತು. ಕೆಂಚಿ ಮೀಸೆ ಕೇಸರಿ ಕಣ್ಣಲ್ಲಿ ಹುಡುಕಿಕೊಂಡು ಬಂದ. ಎದುರಿಗೆ ಪುರುಷರ ತುದಿ ತಲೆ ನೋಡಿದ.

"ಯಾರದು ಮುಂದೆ ಎತ್ತು ಹೋಗುವ ಹೆದ್ದಾರಿಯಲ್ಲಿ ಹೋಗುವುದು?" ಎಂದು ಕೇಳಿದ.

ಹಿಂತಿರುಗಿ ನಿಂತರು. " ನಾವು ಕದ್ರಿ ಸ್ಥಳದ ಜೋಗಿ ಪುರುಷರು" ಎಂದರು.

"ಕದ್ರಿ ಸ್ಥಳದ ಪುರುಷರು ಸುಳ್ಳು ಹೇಳರು. ಕಪಟ ಆಡುವ ಜಾತಿಯಲ್ಲ. ನಾನು ಎರಡು ಮಾತು ಕೇಳುತ್ತೇನೆ" ಎಂದಾಗ ...

"ಕೇಳು ಭೀಮ. ಸತ್ಯ ಇದ್ದುದನ್ನು ಸತ್ಯ ಇದ್ದ ಹಾಗೇ ಹೇಳುತ್ತೇವೆ. ನೋಡಿದುದನ್ನು ನೋಡಿದಂತೆ ಹೇಳುತ್ತೇವೆ".

"ಅರ್ಥ ಮಾಡಿಕೊಳ್ಳಿ! ನಾನು ಕೀಚಕ ವಂಶ ಚೇದನೆ ಮಾಡಿದೆ. ಅಲ್ಲಿಂದ ಎರಡು ಅಣ್ಣ ತಂಗಿ ಮಕ್ಕಳು ಕಡೆಬಾಯಿಯಲ್ಲಿ ಉದುರಿ ಹೋದವು. ತಪ್ಪಿ ಹೋದವು. ಎಲ್ಲಿ ಹೋದವು? ಈ ಕಡೆ ಬಂದುವೇ?" ಎಂದು ಕೇಳಿದ.

"ಬರುವುದಕ್ಕೆ ಬಂದುದು ಹೌದು. ಕೇಳುವುದಕ್ಕೆ ಕೇಳಿದುದೂ ಹೌದು. ಗಂಡು ಬಂತು ಬಲ ಬದಿಗೆ ಹೋಯ್ತು. ಹೆಣ್ಣು ಬಂತು ಎಡಬದಿಗೆ ಹೋಯ್ತು. ನೋಡಿದರೆ ಕಾಣುತ್ತದೆ. ಕರೆದರೆ ಕೇಳುತ್ತದೆ. ಬೆನ್ನು ಹಾಕಿ ಹೋದರೆ ಭೀಮ ಮಕ್ಕಳು ಸಿಗುತ್ತಾರೆ" ಎಂದು ಹೇಳಿದರು.

ಭೀಮ ಬಡಗು ದಿಕ್ಕಿಗೆ ಮುಖ ಮಾಡಿ ಓಡಿಕೊಂಡು ಹೋದ. "ಹೋದ ಭೀಮ ಹಿಂದೆ ಬಂದರೆ ನಮ್ಮ ಮಾತು ಸುಳ್ಳಾದೀತು. ಮಕ್ಕಳನ್ನು ಉಳಿಸಲಿಕ್ಕಿಲ್ಲ."

ಮೂರು ಹೆಜ್ಜೆ ನಡೆದರು. ಮೂರು ಕಲ್ಲು ಹೆಕ್ಕಿದರು. ಮಂತ್ರಿಸಿದರು. ಮುಂದಕ್ಕೆ. ಭೀಮ ಹೋದ ದಾರಿಗೆ ಎಸೆದರು.

"ಮುಂದಕ್ಕೆ ಹೋದ ಭೀಮ ಏಳು ಸಮುದ್ರದ ಆಚೆಗೆ ಹೋಗು. ನಾರಾಯಣ ದೇವರ ಕುಂಚಾಲು ಬೀಸಿಕೊಂಡು ಇರು. ಅದನ್ನು ದಾಟಿ ಬರಬೇಡ. ಬಂದರೆ ಕುಪ್ಪಿಯ ಕಾಡು, ಸೂಜಿಯ ಗುಡ್ಡೆ, ನೈಸ್ರಂಗ್, ಕೆಂಜಿಗ ವನವೆಲ್ಲಾ ಆಗಬೇಕು" ಎಂದರು.

"ಅವುಗಳನ್ನು ದಾಟಿಕೊಂಡು ಬಂದರೆ, ಅಡ್ಡ ಹೊಳೆ ಆಗಬೇಕು. ಹೊಳೆಯಲ್ಲಿ ಕಯ್ ಮುಳುಗಿಸಿದರೆ, ಕಯ್ ಕಲ್ಲಾಗಬೇಕು. ಕಾಲು ಮುಳುಗಿಸಿದರೆ ಕಾಲು ಕಲ್ಲಾಗಬೇಕು. ಭೀಮ ಬಂದು ನೀರಿಗೆ ಇಳಿದರೆ ಕಲ್ಲಾಗಬೇಕು" ಎಂದು ಆಜ್ಞೆ ಮಾಡಿದರು.

"ಆ ಕಡೆಯಲ್ಲೊಂದು ಅಶ್ವತ್ಥ ಮರ. ಈ ಕಡೆಯಲ್ಲೊಂದು ಪೆಜದ ಮರ. ಆ ಕಡೆಯ ಜನ ಈ ಕಡೆ ಬರಬೇಕಾದರೆ, ಈ ಕಡೆಯ ಜನ ಆ ಕಡೆ ಹೋಗಬೇಕಾದರೆ ಹನ್ನೆರಡು ವರ್ಷಕ್ಕೆ ಒಮ್ಮೆ ಮರಕ್ಕೆ ಮರ ಸೇರಬೇಕು. ಒಂದು ದಿವಸಕ್ಕೆ ಆ ಕಡೆಯ ಜನ ಈ ಕಡೆಗೆ ಬರಬೇಕು. ಈ ಕಡೆಯ ಜನ ಆ ಕಡೆ ಹೋಗಬೇಕು" ಹೀಗೆ ಒಂದು ಶಾಪ ಕೊಟ್ಟರು.

ಮಕ್ಕಳನ್ನು ಅಲ್ಲಿಂದ ತೆಗೆದುಕೊಂಡು ಒಂದುವರೆ ದಿನದ ಹರದಾರಿಗೆ ಬಂದರು. ಒಂದು ದೊಡ್ಡ ಮೈದಾನದಲ್ಲಿ ಕಾಸಿ ಕಂಬಳಿ ಹಾಸಿದರು. ಮಧ್ಯದಲ್ಲಿ ದೇವರ ಪೆಟ್ಟಿಗೆ ಇಳಿಸಿದರು. ಮಕ್ಕಳನ್ನು

ಕೆಳಗೆ ಮಾಡಿದರು. ಸುತ್ತು ಮುತ್ತ ಗಂಟು ಮೂಟೆ ಇಟ್ಟುಕೊಂಡರು. ಅಪ್ಪೋಲಿ ಬಂಗಿ ಹಾಕಿಕೊಂಡರು. ರಾಮ ವಾಕ್ಯ ಓದಿಕೊಂಡರು. ಶ್ರೀ ನಾರಾಯಣ ಪದ ಹೇಳಿಕೊಂಡರು. ಮಾಡುವ ಕ್ರಮ ಮಾಡಿಕೊಂಡರು. ಹುಡುಗನನ್ನು ಎತ್ತಿ ಬಲದ ಮಡಿಲಲ್ಲಿ ಇಟ್ಟುಕೊಂಡರು. ಹುಡುಗಿಯನ್ನು ಎಡದ ಮಡಿಲಲ್ಲಿ ಕುಳ್ಳಿರಿಸಿದರು.

"ಚಿಕ್ಕ ಪ್ರಾಯದ ಮಕ್ಕಳು ನೀವು. ಯಾವ ಉದ್ಯೋಗ ಕೆಲಸ ಮಾಡುತ್ತೀರಿ ಮಕ್ಕಳೇ?" ಎಂದು ಕೇಳಿದರು.

"ನಾವು ಜಾತಿ ಕಟ್ಟು ಕುಲ ಕಸಬು ಬಿಟ್ಟು ಇರುವುದಿಲ್ಲ".

"ನೀವು ಚಿಕ್ಕ ಮಕ್ಕಳಾದರೂ ಜಾತಿ ಕಟ್ಟು ಕುಲ ಕಸಬು ಬಿಡುವುದಿಲ್ಲ. ನಮಗೆ ಸಂತೋಷವಾಗಿದೆ". ಮೂರು ಕಲ್ಲು ಮಂತ್ರಿಸಿ ಮತ್ತಾಸ ಗಿಳಿಯಿಂದ ಪರ್ವತಕ್ಕೆ ಎಸೆದರು. "ಮಲೆ ಮಾಯಕ ಆಗಬೇಕು" ಎಂದರು. "ಈಂದ್ ಈಚಿಲ್ ಮೂರು ಮೂರ್ತೆ ಹೆಚ್ಚಬೇಕು" ಎಂದರು.

ಎದುರಿಗೆ ಒಂದು ಕಲ್ಲು ಎಸೆದರು. "ಎತ್ತು ಬಿತ್ತು ಹಟ್ಟಿ ಕೊಟ್ಟಿಗೆ ಆಗಬೇಕು" ಎಂದರು. ಇನ್ನೊಂದು ಕಲ್ಲು ಅವರಾಗಿಯೇ ಎಸೆದರು. ಸಿರಿಗಿಂಡಿ ನೀರು ತೆಗೆದುಕೊಂಡರು. ಸಿರಿಗಿಂಡಿ ನೀರು ಚಿಮುಕಿಸಿದರು. ನವಿಲ ಕುಂಚದಲ್ಲಿ ಬೀಸಿದರು. ನಾಗ ಬೆತ್ತ ಎಳಕೊಂಡು ಏಳು ಸುತ್ತು ಬಂದರು. ಏಳು ಸುತ್ತು ಬರುವಾಗ ಏಳು ಸೂತ್ರದ ಅರಮನೆ ಆಯಿತು. ಮೂರು ಹಿಡಿ ಭಿಕ್ಷೆ ಕೊಡುತ್ತಾರೆ.

"ಮಕ್ಕಳೇ, ಒಂದು ಹಿಡಿ ಅಟ್ಟದಲ್ಲಿ ಹಾಕಿ ಇಡಿ. ಒಂದು ಹಿಡಿ ನೆಲುವಿನಲ್ಲಿ ಹಾಕಿ ಇಡಿ. ಒಂದು ಹಿಡಿ ಮೂಲೆಯಲ್ಲಿ ಹಾಕಿ ಇಡಿ. ಕೊಟ್ಟ ಭಿಕ್ಷೆಯನ್ನು ಮುಟ್ಟಬೇಡಿ ಮಕ್ಕಳೆ. ನಿಮ್ಮ ಸಂಪತ್ತು ನಿಮಗೆ ಮುಂದಕ್ಕೆ ಗುರುತು ಸಿಗುವುದಿಲ್ಲ" ಎಂದರು.

"ನಿಮ್ಮನ್ನು ಮುಟ್ಟಿದ ದೋಷಕ್ಕೆ ನಾವು ಏಳು ಗಂಗೆ ಸ್ನಾನ ಜಪ ಮಾಡಿಕೊಂಡು ಬರುತ್ತೇವೆ" ಎಂದಾಗ,

"ನಮಗೆ ಮೂರು ಮುರ್ತೆ ಕೊಟ್ಟರಿ. ಎತ್ತು ಬಿತ್ತು ಕೊಟ್ಟರಿ. ಹಟ್ಟಿ ಕೊಟ್ಟಿಗೆ, ಮನೆ ಮಾರು ಕೊಟ್ಟರಿ. ಐಶ್ವರ್ಯ ಭಾಗ್ಯ ಕೊಟ್ಟರಿ. ಬೋಳು ಗುಡ್ಡೆಯಲ್ಲಿ ಕಾಟು ಕಾಸರಕನ ಮರ ಹುಟ್ಟಿ ಮರ ಸಾಯುವ ಬಾಳುವೆ ಆಯ್ತು" ಎಂದರು.

"ಮಕ್ಕಳೆ, ನಿಮಗೆ ಏನು ಆಗಬೇಕು?" ಎಂದು ಕೇಳಿದರು.

"ನಮಗೆ ಭೋಗ ಭಾಗ್ಯ ಬರಬೇಕು. ಹರುಷ ಲಗ್ನ ಆಗಬೇಕು".

"ನಿಮಗೆ ಗೊತ್ತಿದೆ. ನಿಮ್ಮ ಕೂಡುಕಟ್ಟಿನ ಬಂದು ಬಳಗ ಭೂಮಿಯ ಮೇಲೆ ನಾಶವಾಗಿದೆ.

ನಾವೇನು ಹೆಣ್ಣಿಗೆ ಗಂಡು ಹುಡುಕಿ ಇಟ್ಟಿದ್ದೇವೆಯೇ? ಆದರೂ ದೊಡ್ಡದಲ್ಲ. ಇಷ್ಟು ಮಾಡಿದ ನಿಮಗೆ ಮದುವೆ ಮೈಸಿರಿ ಮಾಡದೆ ಬಿಡಲಿಕ್ಕಿಲ್ಲ. ನಾವು ನಾಲ್ಕು ಗಂಗೆ ಸುತ್ತಾಡಿಕೊಂಡು ಬರುತ್ತೇವೆ. ನೀವು ಉಳಿದಿದ್ದರೆ ಗಂಡಿಗೆ ಹೆಣ್ಣು, ಹೆಣ್ಣಿಗೆ ಗಂಡು ನೋಡಿ ಬರುತ್ತೇವೆ" ಎನ್ನುವಾಗ,

"ಪುರುಷರೆ ಇದೆಲ್ಲಾ ಆಗುವ ಕೆಲಸವಲ್ಲ. ನೀವು ನಾಲ್ಕು ಗಂಗೆ ತಿರುಗಿಕೊಂಡು ಬರುವುದು ಯಾವಾಗ? ನಮ್ಮ ಮದುವೆ ಆಗುವುದು ಯಾವಾಗ? ಇಷ್ಟರ ತನಕ ಆಗಿಲ್ಲ. ಇನ್ನು ಮುಂದೆ ಆಗಬಾರದು. ನಡು ಸ್ಥಳದಲ್ಲಿ ಆಗುವ ಕೆಲಸ".

"ಏನಿದು ಮಕ್ಕಳೆ?" ಎಂದಾಗ.

"ನಮ್ಮ ಬಳಿ ಬಾಂದ್ರ ಬದಲಾಯಿಸಿ, ಅಣ್ಣ ತಂಗಿಗೆ ಮದುವೆ ಮೈಸಿರಿ ಮಾಡಿರಿ".

"ಮಕ್ಕಳೆ, ಅಣ್ಣ ತಂಗಿಗೆ ಮದುವೆ ಮೈಸಿರಿ ಆಗುವುದಿದೆಯೆ? ಹೊರದ ಪಾಪ ಹೊರಿಸಿದಿರಿ".

"ದೊಡ್ಡದಲ್ಲ" ಎಂದರು. ಪುರುಷರು ಮಕ್ಕಳ ಪಾಪವನ್ನು ಹೊತ್ತುಕೊಂಡರು.

"ಕೀಚಕ ವಂಶದ ಮಕ್ಕಳಿಗೆ ಲಗ್ನವಾಗುತ್ತದೆ. ಕದ್ರಿ ಸ್ಥಳದ ಪುರುಷರು ಲಗ್ನ ಹರ್ಷ ಮಾಡುತ್ತಾರೆ" ಎಂದು ಊರನ್ನು ಕೂಡುನಾಡನ್ನು ಸೇರಿಸಿದರು. ಎರಡು ಪಾಲಾಗಿ ಗಂಡಿಗೆ ಊರು, ಹೆಣ್ಣಿಗೆ ತಮೆರಿ (ತವರು)ಆಗಿ ನಿಂತರು. ದಾರೆಯ ಮಣೆಗೆ ಕರೆ ತಂದರು. ಗಂಡನ್ನು ಪೂರ್ವಕ್ಕೆ ಮುಖ ಮಾಡಿ ನಿಲ್ಲಿಸಿದರು. ಹೆಣ್ಣನ್ನು ಪಶ್ಚಿಮಕ್ಕೆ ಮುಖಮಾಡಿ ನಿಲ್ಲಿಸಿದರು.

ಹುಡುಗನಲ್ಲಿ ಹುಡುಗಿ ಏನಾಗಬೇಕೆಂದು ಕೇಳಿದಾಗ "ನನ್ನ ತಂಗಿಯ ನೆನಪಾಗುತ್ತದೆ" ಎಂದ.

ಹುಡುಗಿಯಲ್ಲಿ ಹುಡುಗ ಏನಾಗಬೇಕೆಂದು ಕೇಳಿದಾಗ "ನನ್ನ ಅಣ್ಣನ ನೆನಪಾಗುತ್ತದೆ"ಎಂದಳು.

ಕದಿರೆಯ ಮಂಜುನಾಥ ದೇವರ ತೀರ್ಥ ಚಿಮುಕಿಸಿದರು. ಹುಡುಗನಲ್ಲಿ ಹುಡುಗಿ ಏನಾಗಬೇಕೆಂದು ಎಂದು ಕೇಳಿದರು.

"ನನ್ನ ಹೆಂಡತಿ" ಎಂದ.

ಹುಡುಗಿಯಲ್ಲಿ ಹುಡುಗ ಏನಾಗಬೇಕು ಎಂದು ಕೇಳಿದರು.

"ನನ್ನ ಗಂಡ" ಎಂದಳು.

ಮುಂದೆ ಧಾರೆಯ ಮಣೆಗಳಲ್ಲಿ ಮೂಡುಮುಖ ಮಾಡಿ ಕುಳ್ಳಿರಿಸಿದರು. ಸೊಂಡಿಲು ಬಾಸಿಂಗ ಕಟ್ಟಿದರು. ದತ್ತದಾರೆ ಎರೆದರು.

"ನಮ್ಮ ಜೀವದಲ್ಲಿ ಬಹಳ ಸಂಕಟವಾಗುತ್ತಿದೆ" ಎಂದರು.

"ನಮಗೆ ಮಕ್ಕಳ ಕಟ್ಟು ಬೇಡ. ಅಳಿಯ ಕಟ್ಟು ಆಗಬೇಕು. ಮಾವನ ಸಂಪತ್ತು ಅಳಿಯನಿಗೆ ಸಿಗಬೇಕು. ತಂದೆಯ ಸಂಪತ್ತು ಬೇಡ".

"ಆಗಬಹುದು ಮಕ್ಕಳೆ" ಎಂದರು. ಸೊಂಡಿಲು ಬಾಸಿಂಗ ತೆಗೆದು ಹೂವಿನ ಜಲ್ಲಿ ಕಟ್ಟಿದರು. ಧಾರೆಯ ಮಣೆಯಲ್ಲಿ ಮಕ್ಕಳಿಗೆ ಹೆಸರಿಟ್ಟರು. ಅಮಾಲೆ ಬನ್ನಾಲೆ ದೇವಿ ಬೈದೆ, ಸಾಲೆ ಬನ್ನಾಲೆ ಕಾಂತು ಬೈದೆ ಅಂತ ಹೆಸರಾಯಿತು.

"ನಿಮಗೆ ಎರಡು ಅವಳಿ ಮಕ್ಕಳಾಗುತ್ತವೆ" ಎಂದರು. "ನಮಗೆ ಹೆಸರಿಟ್ಟರಿ. ಇನ್ನು ಹುಟ್ಟುವ ಮಕ್ಕಳಿಗೆ ಹೆಸರಿಟ್ಟು ಹೋಗಿರಿ" ಎಂದರು.

"ನೀವು ಸಣ್ಣ ಮಕ್ಕಳು. ನೀವು ದೊಡ್ಡದಾಗಿ ನಿಮಗೆ ಹುಟ್ಟುವ ಮಕ್ಕಳಿಗೆ ಏನೆಂದು ಹೆಸರಿಡುವುದು? ದೊಡ್ಡದಲ್ಲ. ಹೆಣ್ಣು ಮಕ್ಕಳು ಹುಟ್ಟಿದರೆ, ಅಬ್ಬಗೆ ದಾರೆಗೆ ಎಂದು ಕರೆಯಿರಿ. ಗಂಡು ಮಕ್ಕಳು ಹುಟ್ಟಿದರೆ, ಚಿವ್ವಾಯ ಚಿಕ್ಕಾಯ ಎಂದು ಕರೆಯಿರಿ" ಎಂದರು. ಹೊರಟು ಹೋಗುತ್ತಾರೆ.

ಅಲವಿನ ದಂಟೆ ಹಿಡಿದುಕೊಂಡರು. ಜೋತಿಕೋಲು ಹಿಡಿದುಕೊಂಡು ಹೋಗುತ್ತಾರೆ. ಮನೆಯ ಹಿಂಬದಿಯಲ್ಲಿ ಮೇಲೆ ತಲೆ ಹೋದ ಶಾಂತಿ ಮರದ ಗುರುತಿಟ್ಟು ಹೋಗುತ್ತಾರೆ.

ಬಡಗು ದಿಕ್ಕಿನ ಗಂಗೆ ಮಿಂದರು. ಕಾಶಿ ರಾಮೇಶ್ವರ ಮಿಂದರು. ಕನ್ಯಾಕುಮಾರಿ ಬದ್ರಿ ನಾರಾಯಣ ಮಿಂದುಕೊಂಡು ಸ್ನಾನ ಜಪ ಮಾಡಿಕೊಂಡರು. ಮಕೆ ಮಾಯ ಮಿಂದುಕೊಂಡು ಹಿಂದಕ್ಕೆ ಹೊರಟರು. ಒಂದೂವರೆ ಆಳು ಎತ್ತರದ ಅಲವಿನ ದಂಟೆ ಒಂದು ದೇಣಿಗೆ ಬಂತು. ತೆಂಗಿಗೆ ಹದಿನಾರು ವರ್ಷ ಕಳೆದು ಹೋಗಿದೆ. ತಲೆ ಹೋಗ ಶಾಂತಿಯ ಮರದ ಕಡೆಯಿಂದ ಬಂದರು. ಬರುವಾಗ ಸಂಜೆಯ ಮಬ್ಬು ಹೊತ್ತಾಗಿದೆ.

"ನಾವು ತಡೆ ಬಿಡಾರಕ್ಕೆ ಎಲ್ಲಿಗೆ ಹೋಗುವುದು" ಎಂದು ಕೇಳುವಾಗ.

"ಮುಂದೆ ಸಿಗುವುದು ಕಾಡು. ಹಾಗಿರುವಾಗ ನಾವು ಚಿಕ್ಕ ಪ್ರಾಯದ ಮಕ್ಕಳನ್ನು ಸಲಹಿ ಸಾಕಿದ್ದೇವೆ. ಪೂಪೂಜನೆ ಉಪದೇಶ ಕೊಟ್ಟು ಹೋಗಿದ್ದೇವೆ. ಅಲ್ಲಿಗೆ ಹೋಗುವ ಮಕ್ಕಳನ್ನು ಮಾತಾಡಿಸಿದ ಹಾಗಾಗುತ್ತದೆ."

"ಅಲ್ಲಿಗೆ ಹೋದರೆ ನಮ್ಮ ಗುರುತು ಸಿಗಲಿಕ್ಕಿಲ್ಲ. ಅಲ್ಲಿಗೆ ಹೋಗುವುದು ಬೇಡ".

"ಅಲ್ಲಿಗೆ ಹೋಗುವ. ಹೋಗದಿದ್ದರೆ ಮಾತನಾಡಿಸಿ ಹೋಗುತ್ತೇವೆಂದು ಹೇಳಿದ ಮಾತು ಸುಳ್ಳಾಗುತ್ತದೆ". ಹೀಗೆ ಹೇಳಿ ಇಳಿದು ಅಂಗಳದ ಬಳಿಗೆ ಬಂದರು. ಅಂಗಳದ ಮುಂದೆ ಬಂದು ಮೂರು ಸರ್ತಿ ಕರೆದರು. ದೇವಿ ದೇವಿ ಎಂದು ಮೂರು ಸರಿ ಕರೆಯುವಾಗ ಹೊರಗೆ ಬಂದಳು.

"ಕರೆಯುವುದು ಯಾಕೆ. ಏನು ವಿಚಾರ?"

"ನಾವು ಕದ್ರಿ ಸ್ಥಳದ ಪುರುಷರು"

"ಕದ್ರಿ ಸ್ಥಳದ ಪುರುಷರಾದರೆ ಏನಾಗಬೇಕು?"

"ನಮಗೆ ಏನೂ ಆಗಬೇಕಾಗಿಲ್ಲ. ಏನೂ ಹೋಗಬೇಕಾಗಿಲ್ಲ. ನಿನ್ನಲ್ಲಿ ಆರು ರಾಶಿ ತನಕ ಇದ್ದು ಬೆಳಗು ಆಗಬೇಕು" ಎಂದು ಕೇಳಿದರು.

"ನಮ್ಮಲ್ಲಿ ಜಾಗೆಯಾದರೂ ಎಲ್ಲಿ ಉಂಟು? ಒಂದು ಕೋಣೆಯಲ್ಲಿ ಭತ್ತದ ರಾಶಿ ಉಂಟು. ಒಂದು ಕೋಣೆಯಲ್ಲಿ ಬದುಕು ಬಂಗಾರ ಇಟ್ಟಿದೆ ನೋಡಿ. ಒಂದು ಅಡುಗೆ ಆರೋಗಣೆಯ ಕೋಣೆ. ಚಾವಡಿ ಯಾರಾದರೂ ಬಂದರೆ ಕುಳಿತುಕೊಳ್ಳಲು ಬೇಕು. ಇಲ್ಲಿ ಜಾಗೆ ಇಲ್ಲ. ಮೇಗಿನ ಮನೆಗೆ ಹೋಗಿ".

"ಮೇಗಿನ ಮನೆಗೆ ಹೋಗುವುದಿದ್ದರೆ ನಿನ್ನ ಮನೆಗೆ ಬರುವುದಿಲ್ಲ. ನಿನ್ನ ಮನೆಯಲ್ಲಿ ಜಾಗೆ ಉಂಟೊ ಇಲ್ಲವೊ ನೋಡಬೇಕು".

"ಹಾಗಿದ್ದರೆ, ಮನಸ್ಸು ಇದ್ದರೆ ಅಡುಗೆ ಮಾಡಿರಿ. ಕಟ್ಟಿಗೆ ಕೊಟ್ಟಿಗೆಯಲ್ಲಿ ಮಲಗಿರಿ" ಎಂದಳು.

"ಆಗಬಹುದು ಬೈದೆ ಅಷ್ಟಾದರೂ ಮಂಜುನಾಥ ದೇವರು ನಿನಗೆ ಬುದ್ಧಿ ಕೊಟ್ಟರು".

ಬಚ್ಚಲು ಮನೆಗೆ ಹೋಗುವಾಗ ಮೊಣಕಾಲು ತನಕ ಬೂದಿಯ ರಾಶಿ ಇತ್ತು. ಕಾಲಿನಲ್ಲಿ ಬೂದಿಯನ್ನು ಆಚೆಯದನ್ನು ಆಚೆ ಮಾಡಿದರು. ಈಚೆಯ ಬೂದಿ ಈಚೆ ಮಾಡಿದರು. ಶುದ್ಧ ಮುದ್ರಿಕೆ ಮಾಡಿಕೊಂಡರು. ಕಾಶಿ ಕಂಬಳಿ ಹಾಸಿದರು. ಮಧ್ಯದಲ್ಲಿ ದೇವರ ಪೆಟ್ಟಿಗೆ ಇಟ್ಟರು. ಸುತ್ತು ಮುತ್ತ ಗಂಟು ಮೂಟೆ ಇಟ್ಟರು. ಮುಂದಿಲ್‌ಗೆ ಹೋದರು.

"ದೇವಿ ನಿನ್ನ ದಯೆ ಧರ್ಮದಲ್ಲಿ ಜಾಗೆ ಆಯಿತು. ಐಯಲ ಅಕ್ಕಿ ಬೇಯುವ ಒಂದು ಮಡಿಕೆ ಕೊಡು ಬೈದೆ" ಎಂದು ಕೇಳಿದರು.

"ಮಣ್ಣಿನ ಪಾತ್ರೆ ಇಲ್ಲ. ಕಂಚಿ, ತಾಮ್ರದ ಪಾತ್ರೆಗಳು ಇರುವುದು ಅವುಗಳನ್ನು ಒಲೆಯಲ್ಲಿ

ಇಟ್ಟರೆ ಕಪ್ಪಾಗುತ್ತದೆ. ಇಲ್ಲ ಅಂತ ಹೇಳಲಿಕ್ಕಿಲ್ಲ. ಒಂದು ಪಾತ್ರೆ ಇದ್ದುದು ಹದಿನಾರು ತೂತು ಆಗಿದೆ".

ಗೆಜ್ಜೆ ಕತ್ತಿ ಹಿಡಿದುಕೊಂಡು ಅಟ್ಟಕ್ಕೆ ಹೋದಳು. ಕುಕ್ಕಿ ಹದಿನಾರು ತೂತು ಮಾಡಿ ತಂದು ಕೊಟ್ಟಳು. ಬೂದಿ ತೆಗೆಯುವ ಸಟ್ಟುಗ ಹಿಡಿದುಕೊಂಡು ಹೋದರು. ಅಂಗರೆ ಕರಿಯಕ್ಕೆ ಹೋದರು. ಚಂದ ಮಾಡಿ ತೊಳೆದರು. ಮಂಜುನಾಥ ದೇವರ ತೀರ್ಥ ಹಾಕಿದರು. ಒಲೆಯಲ್ಲಿ ನೀರು ಇಟ್ಟರು.

ನೀರು ಬಿಸಿ ಆಗುತ್ತ ಬಂದಾಗ ಇನ್ನೊಬ್ಬರು ಎದ್ದರು. ಅಂಗಳದ ಮುಂದಕ್ಕೆ ಹೋದರು.

"ಕೇಳಿದಿಯೊ ತಾಯಿ, ನಿನ್ನ ಧರ್ಮದಲ್ಲಿ ಜಾಗೆ ಆಯ್ತು. ಮಡಿಕೆ ಆಯ್ತು. ಐಯಲ ಅಕ್ಕಿ ಕೊಡು ಬೈದೆ. ಬೆಳಗ್ಗೆ ಹೋಗುವಾಗ ಅಕ್ಕಿಗೆ ಅಕ್ಕಿ ಕೊಡುವ. ಇಲ್ಲವಾದರೆ ಅದಕ್ಕೆ ತಗಲುವ ಹಣವಾದರು ಕೊಡುವ".

"ಅಕ್ಕಿ ಸಾಮಾನು ಹರಳು ಕೂಡಾ ಇಲ್ಲ. ದಂಡಿಗೆ ಹೋದವರಿಗೆ ಕೋಳಿಗೆ ಇಟ್ಟ ಮೂಗಕ್ಕಿ ಗೇರಿ ಗಂಜಿ ಮಾಡಿ ಇಟ್ಟಿರುತ್ತೇನೆ" ಎನ್ನುವಾಗ -

"ಗೆರಸೆ ಸೇರನ್ನಾದರೂ ಕೊಡು" ಎಂದರು.

ಗೆರಸೆ ಸೇರು ತೆಗೆದುಕೊಂಡರು. ಐದು ಜನರ ಐದು ಜೋಳಿಗೆ ಕೊಡಹಿದಾಗ ಐದು ಅಕ್ಕಿ ಕಾಳು ಬಂತು. ಐದು ಸರ್ತಿ ಅಳತೆ ಮಾಡುವಾಗ ಐಯಲ ಅಕ್ಕಿ ಆಯ್ತು.

ಅಕ್ಕಿಯ ಅಕ್ಕಚ್ಚು ತೆಗೆದರು. ಅನ್ನಕ್ಕೆ ಅಕ್ಕಿ ಹಾಕಿದರು. ಅನ್ನ ಬೆಂದುಕೊಂಡು ಬರುವಾಗ ಮತ್ತೊಬ್ಬ ಎದ್ದ. ಅಂಗಳದ ಮನೆ ಮುಂದೆ ಬಂದ. ಕಯ್ಯಲ್ಲಿ ಹರಿವೆಯ ಬೀಜ ಹಿಡಕೊಡು ಹಿಂಬದಿಗೆ ಹೋಗಿ ಕಲ ಹರಿವೆ ಬಿತ್ತಿ ಬಂದನು.

"ಕೇಳಿದೆಯಾ ತಾಯಿದೇವಿ, ನಿನ್ನ ಧರ್ಮದಲ್ಲಿ ಸ್ಥಳವಾಯ್ತು ಮಡಿಕೆ ಆಯ್ತು. ಅನ್ನ ಹೇಗಾದರೂ ಬೆಂದಿತು. ಪದಾರ್ಥಕ್ಕೆ ಏನು ಕೊಡುತ್ತಿ?" ಎನ್ನುವಾಗ

"ಪದಾರ್ಥಕ್ಕೆ ಏನು ಕೊಡುವುದು. ನಮ್ಮಲ್ಲಿ ಹಾಳು ಬಸಳೆ, ಕೊಯ್ಯಲು ಜನ ಇಲ್ಲದಾಗಿದೆ" ಎಂದಳು.

"ಮನೆಯ ಹಿಂಬದಿಯಲ್ಲಿ ಒಂದುಕಲ ಹರಿವೆ ಇಟ್ಟುಕೊಂಡು ಯಾಕೆ ಸುಳ್ಳು ಹೇಳುತ್ತಿ?"

ಹಿಂಬಾಗಿಲಲ್ಲಿ ಹೋಗಿ ನೋಡುವಾಗ ಗೋಳಿಯ ಗಿಡದ ಹಾಗಿರುವ ಹರಿವೆ ಇತ್ತು. ಕೀಳಲು ಕಯ್ ಬರುವುದಿಲ್ಲ. ತಾಂಟ ಮೋಂಟ ಕಡೆ ಕಿತ್ತು ಕೊಡುತ್ತಾಳೆ.

"ನೀನೂ ಎರಡು ತುಂಡು ಕೊಂಡು ಹೋಗು ಬೈದೆ" ಎಂದರು.

"ನಮ್ಮ ಗಂಡಸರು ಬಿತ್ತಿ ಇಟ್ಟ ಹರಿವೆ ಅದು".

"ಆಗಲಿ ಬೈದೆ" ಎಂದರು.

ಐದು ಹೆಜ್ಜೆ ಮುಂದೆ ಬಂದರು.

"ಹಿಂದಕ್ಕೆ ನೋಡು ಬೈದೆ" ಎನ್ನುವಾಗ ನೋಡಿದಳು. ಮಾಯಕದ ಹರಿವೆ ಕಲ ಮಾಯಕ ಆಗಿದೆ. ಪಂಚೆರೆಂಗಿ, ನಾಚಿಕೆಯ ಮುಳ್ಳು ಮೊಳೆಯಿತು. ದೇವಿ ಒಳಗೆ ಹೋದಳು. ಪುರುಷರು ಪದಾರ್ಥ ಮಾಡಿದರು. ಊಟ ಭೋಜನ ಮಾಡಿದರು. ಕಟ್ಟಿಗೆಯ ಕೊಟ್ಯಕ್ಕೆ ಬರುವಾಗ ಮೊಣಕಾಲು ತನಕ ಉಮಿಯ ರಾಶಿ ಬಿದ್ದಿತ್ತು. ಆಚೆಯ ಉಮಿ ಆಚೆಗೆ, ಈಚೆಯ ಉಮಿ ಈಚೆಗೆ ಮಾಡಿದರು. ಶುದ್ಧ ಮುದ್ರಿಕೆ ಮಾಡಿ ಕೊಂಡರು. ಕಾಶಿ ಕಂಬಳಿ ಹಾಸಿದರು. ತಲೆಯ ಬಳಿ ದೇವರ ಪೆಟ್ಟಿಗೆ ಇಳಿಸಿದರು. ಸಾಲು ಹಿಡಿದು ಐದು ಜನರು ಕುಳಿತರು. ಐವರಲ್ಲಿ ಇಬ್ಬರು ಎರಡು ಎಳೆಯ ಒಡ್ಡಿ ನೇವಳ ಜಾರಿಸಿದರು. ಒಂದಕ್ಕೆ ಸುಣ್ಣದ ಗೀಟು ಎಳೆದರು. ಕಟ್ಟಿಗೆಯ ರಾಶಿಗೆ ಎಸೆದರು. ಬಿಳಿ ಸರ್ಪ ಆಗಬೇಕೆಂದು ಹೇಳಿದರು. ಇನ್ನೊಂದು ನೂಲು ತೆಗೆದರು. ಮಸಿಯಾ ಗೀಟು ಎಳೆದರು. ಕರಿಯ ಸಂಕಪಾಲ ಆಗಬೇಕು ಎಂದರು. ಕಟ್ಟಿಗೆಯ ಮುಟ್ಟೆಗೆ ಎಸೆದರು.

"ದೇವಿ ಬಂದು ಕಟ್ಟಿಗೆ ಎತ್ತಿಕೊಳ್ಳುವಾಗ ಕರಿಯ ಶಂಕಪಾಲ ಮತ್ತು ಬಿಳಿಯ ಸರ್ಪ ರಟ್ಟೆಗೆ ಕಚ್ಚಬೇಕು" ಎಂದರು.

ಕಾವಿ ಹೊದ್ದು ಮಲಗಿದರು. ಅಷ್ಟು ಹೊತ್ತಿಗೆ ದಂಡಿಗೆ ಹೋದವ ಕಾಂತನ ಬಂದ. ದಾರಿಯಲ್ಲಿ ಬರುವಾಗಲೇ "ಪೋಸಕ್ಕೆ ಏನು ಮಾಡಿರುವೆ" ಎಂದು ಕೇಳಿದ.

"ರುಬ್ಬಿ ಇಟ್ಟ ಹಿಟ್ಟು ಇದೆ. ತಂದಿಟ್ಟ ಕಟ್ಟಿಗೆ ಇಲ್ಲ" ಎಂದು ಹೇಳಿ ಓಡಿಕೊಂಡು ಹೋದಳು. ಕಟ್ಟಿಗೆಯ ರಾಶಿಗೆ ಹೋಗಿ ಒಂದು ತರ್ಕಿಲ್ ಕಟ್ಟಿಗೆ ತಬ್ಬಿಕೊಂಡು ತೆಗೆದಳು. ಕರಿಯ ಸಂಕಪಾಲ ಬಿಳಿಯ ಸರ್ಪ ಬಲದ ತೋಳಿಗೆ ಎಡದ ತೋಳಿಗೆ ಕಚ್ಚಿದವು.

ಕಟ್ಟಿಗೆ ತೆಗೆದು ಬಿಸಾಡಿದಳು. ಅರಿಯ ಮುರಿಯ ಎಂದು ಬೊಬ್ಬೆ ಮಾಡಿಕೊಂಡು ಬಂದಳು. ಚಾವಡಿಯ ಮೆಟ್ಟಿಲಲ್ಲಿ ಒಂದು ಕಾಲು ಒಳಗೆ ಇಟ್ಟಿದ್ದಾಳೆ. ಒಂದು ಕಾಲು ಹೊರಗೆ ಇಟ್ಟಿದ್ದಾಳೆ.

"ನಾನು ಇದರಲ್ಲಿ ಬದುಕುವುದಿಲ್ಲ, ನಾನಿದರಲ್ಲಿ ಬಾಳುವುದಿಲ್ಲ" ಎಂದಳು. ದಡ್ಡ ಮಗುಚಿ ಬಿದ್ದಳು. ಕಪ್ಪು ನೊರೆ ಕಾರಿದಳು. ಬಿಳಿಯ ನೊರೆ ಹರಿಸಿದಳು. ಕಯ್ ಬಿಟ್ಟು ಕೈಲಾಸಕ್ಕೆ, ಜೀವ ಬಿಟ್ಟು ವೈಕುಂಟಕ್ಕೆ ಸೇರಿದಳು.

ಕಾಂತನ ದೊಡ್ಡ ಉಸಿರು ಬಿಟ್ಟ. ದೊಡ್ಡ ಚಿಂತೆ, ದೊಡ್ಡ ದುಃಖದಲ್ಲಿ ಕುಳಿತ. "ನಮ್ಮನ್ನು ಸ್ಥಳದ ಪುರುಷರು ಬಂದು ಕೇಳಿದರೆ, ದೇವಿ ಎಲ್ಲಿಯೆಂದು ಕೇಳಿದರೆ ಏನೆಂದು ಹೇಳಲಿ?"

ಆಗ ಚಿಕ್ಕಾಯ ಚುವ್ವಾಯ ಮಕ್ಕಳು ಬಂದರು.

"ಮಕ್ಕಳೆ ನೀವು ಗದ್ದೆಗೋರುವ ಹಲಗೆಯನ್ನು ಕೊಟ್ಟಿಗೆಯಿಂದ ತನ್ನಿರಿ. ಆ ಕಡೆಯ ಮಾವು ಈ ಕಡೆಯ ಹಲಸಿನ ಮರ ಕಡಿಯಿರಿ. ಆಶನದ ಗದ್ದೆಯಲ್ಲಿ ಮಸಣದ ಕಾಷ್ಟ ಏರಿಸಿ. ನಿಮ್ಮ ತಾಯಿಯನ್ನು ಅಲಂಕರಿಸಿ".ಎಂದು ದುಃಖಿಸಿದ.

ಮಕ್ಕಳು ಕೊಟ್ಟಿಗೆಗೆ ಹೋಗಿ ಹಲಿಗೆ ಎಳೆದು ತೆಗೆಯುವಾಗ ಸರ್ಪಗಳು ಬುಸುಗುಟ್ಟುತ್ತ ಬಂದವು. ಬುಸುಗುಟ್ಟುತ್ತ ಸರ್ಪಗಳು ಬಂದಾಗ ಮಕ್ಕಳು ಹಿಂದಕ್ಕೆ ಬಂದವು. "ಹಾಗಿದ್ದರೆ ನಾನು ಹೋಗುತ್ತೇನೆ. ನನಗೆ ಕುಕ್ಕಿ ಕೊಂದರೆ ಇಬ್ಬರನ್ನು ಒಟ್ಟಿಗೆ ಚಂದ ಮಾಡಿರಿ".

"ಇವತ್ತು ನಾಳೆಯಾಗಿ ಕದ್ರಿ ಸ್ಥಳದ ಪುರುಷರು ಬರುತ್ತಾರೆ. ನಮ್ಮನ್ನು ಕೇಳಿದರೆ ನಡೆದುದನ್ನು ತಿಳಿಸಿರಿ. ಹಿಡಿದ ಕಾಲು ಬಿಡಬೇಡಿರಿ. ನಮ್ಮ ಮಕ್ಕಳು ಎಂದರೆ ಬಿಟ್ಟು ಹೋಗಲಿಕ್ಕಿಲ್ಲ. ಇಲ್ಲವಾದರೆ ಒಳ್ಳೆಯ ದಾರಿ ತೋರಿಸುವರು". ಹೀಗೆ ಬುದ್ಧಿ ಹೇಳಿ, ಕಾಂತನ ಕೊಟ್ಟಿಗೆಗೆ ಹೋದನು. ಹಲಗೆ ಎಳೆಯುವಾಗ ಮಾಯಕದ ಸರ್ಪಗಳು ಮಾಯಕ ಆಗಿದ್ದವು.

ಬಲದ ಮಗ್ಗುಲು ನೋಡುವಾಗ ಅಯ್ಯರು ಕಾವಿ ಹೊದ್ದು ಮಲಗಿದುದು ಕಾಣುತ್ತದೆ.

"ನೀವು ಕಟ್ಟಿಸಿದ ಅರಮನೆ ಇಷ್ಟು ದೊಡ್ಡದು ಇರುವಾಗ, ನೀವು ಏನು ಕೊಟ್ಟಿಗೆಯಲ್ಲಿ ಮಲಗಿದ್ದು?" ಎಂದು ಕೇಳಿದ.

"ಕಾಂತನ, ನಮಗೆ ಅರಮನೆಯೂ ಒಂದೆ, ಮರದ ಅಡಿಯೂ ಒಂದೆ ನೋಡು. ನಾಲ್ಕು ಊರು ನಾಕು ದೇಶ ತಿರುಗುತ್ತ ಹೋಗುವ ಪುರುಷರು ನಾವು". ಎಂದರು.

ಕಯ್ ಹಿಡಿದು ಎಬ್ಬಿಸಿಕೊಂಡು ಚಾವಡಿಗೆಕೊಂಡು ಹೋದ. ಚಾವಡಿಯಲ್ಲಿ ದೇವಿ ಬಿದ್ದಿರುವ ಚಂಧ. ನೋಡಿದರು.

"ಏನಾಯಿತು ಕಾಂತನ?"

"ದೇವಿಯನ್ನು ಜೀವದಲ್ಲಿ ನೋಡುವ ಭಾಗ್ಯ ಇಲ್ಲವೊ ಏನೋ. ಹೆಣದ ಮುಖದಲ್ಲಿ ಆದರೂ ನೋಡಿರಿ". ಮುಖದ ಬಟ್ಟೆ ತೆಗೆದು ತೋರಿಸಿದ.

"ಕಾಂತನ, ನೀನು ದುಃಖ ಪಡುವುದು ಬೇಡ" ಎಂದು ಸಿರಿಗಿಂಡೆಯ ನೀರು ತೆಗೆದುಕೊಂಡರು. ನಾಗದರ್ಬೆ ನವಿಲಿನ ಕುಂಚಾಲು ತೆಗೆದುಕೊಂಡರು. ಗಿಂಡೆಯ ನೀರು ಚಿಮುಕಿಸಿ ಕುಂಚಾಲಿನಿಂದ ಈಸಿದರು.

"ದೇವಿ ಬೈದೆ, ದೇವಿ ಬೈದೆ, ದೇವಿ ಬೈದೆ" ಎಂದು ಕರೆದರು. ಸ್ವಪ್ನ ಕಂಡು ಎದ್ದಂತೆ ಎದ್ದಳು. ಪುರುಷರನ್ನು ಕಾಂತನ ಕಲ್ಲ ಕಲೆಂಬಿಯಲ್ಲಿ ಕುಳ್ಳಿರಿಸಿದ. ಹರಿವಾಣ ತಂದು ಇಟ್ಟ. ಐದು ಜನರ ಕಾಲಿಗೆ ಗಿಂಡ್ಯೆಯಲ್ಲಿ ನೀರು ಹಾಕಿ ತೊಳೆದ. ಚಾವಡಿಯಲ್ಲಿ ಹೂವಿನ ಹಾಸುಗೆ ಹಾಸಿ ಕೊಟ್ಟ. ಹಾಲು ಕುಡಿಯಲು ಕೊಟ್ಟು ಕಾಲು ಒತ್ತುತ್ತಿದ್ದರು.

"ನೀನು ದಂಡಿಗೆ ಹೋಗಿ ಸೋತು ಬಂದವನು. ಊಟ ಮಾಡಿ ಮಲಗು ಕಾಂತನ" ಎಂದರು. ಎಷ್ಟಕ್ಕೂ ಹೋಗಲಿಲ್ಲ. ನಿದ್ರೆ ಬರುವುದಿಲ್ಲ. ಮಲಗಿದಲ್ಲಿ ಅಯ್ಯರುಗಳು ಒಂದು ಬುದ್ಧಿಯಾದರು.

ನಿದ್ದೆ ಬಂದ ಹಾಗೆ ಗೊರಕೆ ಹೊಡೆಯಲು ಶುರು ಮಾಡಿದರು. ನಿದ್ದೆ ಬಂತು ಎಂದು ಕಾಂತನ ಹೊದಿಕೆ ಹಾಕಿದ. ಒಳಗೆ ಹೋಗಿ ಹೆಂಡತಿಯಲ್ಲಿ ಹೇಳಿದ.

"ಬೆಳಗ್ಗೆ ಪುರುಷರು ಹೋಗುವಾಗ ನಮ್ಮ ಐಯಲ ಅಕ್ಕಿ ಕೊಡಬೇಕು. ಅಡುಗೆ ಅರಗ್ಗಣೆ ಮಾಡಿ, ಊಟ ಭೋಜನ ಮಾಡಿ ಹೋಗಬೇಕು" ಎಂದ. ಮಲಗಿ ಬೆಳಗ್ಗೆ ಬೇಗ ಎದ್ದ. ಬೆಳ್ಳಿಯ ತರ್ಕತ್ತಿ, ಬಂಗಾರದ ಅಂಡೆ ತೆಗೆದುಕೊಂಡ. ಅಂಗಯಿ ಬಲೆ, ಮುಂಗಾಯಿ ಸರಪಳಿ ಇಟ್ಟುಕೊಂಡ. ಆ ಗಂಧ ಮಲೆಗೆ ಬೋಗಂಧ ಮೂರ್ತೆಗೆ ಹೋದ.

ಪುರುಷರು ಎದ್ದರು. ಅಂಗರೆ ಕರಿಯಕ್ಕೆ ಹೋದರು. ಕಯ್ ಕಾಲು ಮುಖ ತೊಳೆದರು. ನಾಮ ಎಳೆದುಕೊಂಡರು. ದೌರಂಗಿ ಹಾಕಿಕೊಂಡರು. ಕತ್ತರಿ ಮುಂಡಾಸು ಕಟ್ಟಿಕೊಂಡರು. ಎಡ ಕೈಯಲ್ಲಿ ತಾಳ ತಂಬೂರಿ ಹಿಡಿದುಕೊಂಡರು. ಬಲದ ಕೈಯಲ್ಲಿ ಅಕ್ಷಯ ಪಾತ್ರೆ ಹಿಡಿದುಕೊಂಡರು. ರಾಮ ವಾಕ್ಯ ಓದಿಕೊಂಡು, ಹರಿ ನಾರಾಯಣ ಪದ ಹೇಳಿಕೊಂಡು ಅಂಗಳದ ಮುಂದುಗಡೆಗೆ ಬಂದರು.

ದೇವಿ ಓಡಿಕೊಂಡು ಬಂದಳು. "ನಮ್ಮ ಗಂಡಸರು ಐಯಲ ಅಕ್ಕಿ ಕೊಡಲು ಹೇಳಿರುತ್ತಾರೆ. ಇಲ್ಲಿ ಒಂದು ಕಾಳಾ ಅಕ್ಕಿ ಇಲ್ಲ. ಮುಂದಕ್ಕೆ ನಿಮ್ಮ ಹಂಗುಬೇಡ. ನೀವು ಯಾವಾಗಲೂ ಬಂದು ಕಿರಿಕಿರಿ ಮಾಡಬಾರದು" ಎಂದಳು.

ಅಟ್ಟದಿಂದ ಒಂದು ಹಿಡಿ, ನೆಲುವಿನಿಂದ ಒಂದು ಹಿಡಿ, ಮೂಲೆಯಿಂದ ಒಂದು ಹಿಡಿ ಭಿಕ್ಷೆ ತಂದು ಕೊಟ್ಟಳು. "ಕೇಳಮ್ಮ ದೇವಿ ಮುಂಜಾನೆ ನೀನು ಕಯೆತ್ತಿ ಕೊಟ್ಟೆ. ಮುಂಜಾನೆ ನೀನು ಕೊಟ್ಟ ಭಿಕ್ಷೆ ಹಿಂತಿರುಗಿ ಕೊಡುವುದಿಲ್ಲ ನೆನಪಿಡು" ಎಂದು ಹೇಳಿ, ಅಂಗಳ ಇಳಿದು ಹೋದರು.

ಅಂಗರೆ ಕರಿಯಕ್ಕೆ ಹೋದರು. ಬಡಗು ದಿಕ್ಕಿಗೆ ಹೋದ ಬಂಗ ಬಾಳೆಯ ಎಳೆಯನ್ನು ಕಡಿದರು. ನೀರಿನ ಮೇಲೆ ಇಟ್ಟರು. ಮಧ್ಯದಲ್ಲಿ ದೇವರ ಪೆಟ್ಟಿಗೆ ಇಟ್ಟರು. ಸುತ್ತಮುತ್ತ ಐದು ಮೂಲೆಯಲ್ಲಿ ಐದು ಮಂದಿ ಕುಳಿತರು. ದೋಣಿ ಹೋದ ಚಂದದಲ್ಲಿ ಹೋಗುತ್ತಿದೆ. ಅಷ್ಟು ಹೊತ್ತಿಗೆ ಮೂರ್ತೆಗೆ ಹೋದ ಕಾಂತನನ ಅಂಗೈಯ ಬಳೆ ಇಲ್ಲವಾಯ್ತು. ಮುಂಗೈ ಸರಪಳಿ ಇಲ್ಲವಾಯ್ತು. ಬೆಳ್ಳಿಯ ಮೂರ್ತೆಕತ್ತಿ ಇಲ್ಲವಾಯ್ತು. ಚಿನ್ನದ ಅಂಡೆ ಇರಲಿಲ್ಲ. ಈಂದ್ ಈಚಲು ಇಲ್ಲವಾಯ್ತು. ಮಲೆಕಾಡು ಬೆಳೆದಿದೆ.

ಓಡಿಕೊಂಡು ಬಂದು ನೋಡುತ್ತಾನೆ. ಬೇಸಾಯ ಕೃಷಿ ಇರಲಿಲ್ಲ. ಎತ್ತು ಬಿತ್ತು ಇರಲಿಲ್ಲ. ಮನೆ ಮಠ ಇರಲಿಲ್ಲ. ಬಾಯಾರಿಕೆಗೆ ಏನಾದರೂ ಕೊಡು ಅಂದರೆ, ಅಟ್ಟ ಮಡಿಕೆಯಲ್ಲಿ ತೆಳಿ ಕೂಡಾ ಇರಲಿಲ್ಲ. ಅನ್ನದ ಪಾತ್ರೆಯಲ್ಲಿ ಅನ್ನ ಇರಲಿಲ್ಲ. ಹಾಲಿನ ಬಿಸಲೆಯಲ್ಲಿ ಹಾಲು ಇರಲಿಲ್ಲ. ಮಜ್ಜಿಗೆ ಇರಲಿಲ್ಲ.

"ನೀನು ಪುರುಷರಿಗೆ ಏನು ಹೇಳಿದೆ. ಎಲ್ಲಿ ಹೋದರು" ಎಂದು ಕೇಳಿದಾಗ

"ನಾನು ಏನೂ ಹೇಳಲಿಲ್ಲ. ಏನು ಕೊಟ್ಟಿಲ್ಲ. ಅವರ ಹಂಗು ಇನ್ನು ಮುಂದೆ ಬೇಡವೆಂದು ಮೂರು ಹಿಡಿ ಭಿಕ್ಷೆ ಹಿಂದೆ ಕೊಟ್ಟೆ".



"ಮನೆ ತೆಗೆದೆ. ನಿನಗೆ ಹಿಂದೆ ಕೊಡಲು ಕೊಟ್ಟುದೇ? ತೆಗೆದೆಯ ಮನೆಯನ್ನು!" ಪುರುಷರನ್ನು ಕೂಗುತ್ತ ಅಂಗಾರೆ ಕರಿಯಕ್ಕೆ ಹೋದ. ಪುರುಷರು ಇನ್ನೊಂದು ದಡಕ್ಕೆ ತಲುಪಿ ಆಗಿದೆ. ಮೂರು ಸರ್ತಿ ಕೂಗಿ ಕರೆದ. ಹಿಂದಿರುಗಿ ನೋಡಿದರು. ಹಿಂದಿರುಗಿ ನೋಡಿದಾಗ ಕಾಂತನ ನೀರಿಗೆ ಹಾರಿದ್ದ. ಪುರುಷರು ಎಲೆಯ ತುದಿ ತಿರುಗಿಸಿದರು. ಈಚೆ ದಡಕ್ಕೆ ಬಂದರು.

ಏರಿದ ನೀರನ್ನು ಇಳಿಸಿದರು. ಇಳಿಸಿದ ನೀರನ್ನು ಏರಿಸಿದರು. ಕಾಂತನನನ್ನು ಮೇಲಕ್ಕೆ ತಂದರು. ಕುಡಿದ ನೀರನ್ನು ಕಾರಿಸಿದರು. "ಜೀವ ತೆಗೆದುಕೊಳ್ಳುವುದು ಯಾಕೆ" ಎಂದರು.

"ನಿನ್ನಿಂದ ತುಂಬಾ ಕೆಲಸ ಆಗಲಿಕ್ಕಿದೆ"

"ನೀವು ಕೊಟ್ಟ ಐಶ್ವರ್ಯ ನೀವು ಕೊಂಡು ಹೋದ ಮೇಲೆ ನನ್ನ ಜೀವ ಯಾಕೆ?"

"ನಿನಗೆ ಇಟ್ಟುಕೊಳ್ಳುವ ಯೋಗ್ಯತೆ ಇತ್ತು. ನಿನ್ನ ಹೆಂಡತಿಗೆ ಇಟ್ಟುಕೊಳ್ಳುವ ಯೋಗ್ಯತೆ ಇರಲಿಲ್ಲ. ನಾವು ಕೇಳಿ ತೆಗೆದುಕೊಂಡುದು ಅಲ್ಲ. ಅವಳಾಗಿಯೇ ಕೈಯೆತ್ತಿ ಕೊಟ್ಟುದು. ಮುಂಜಾವಿನಲ್ಲಿ ಕೊಟ್ಟ ಭಿಕ್ಷೆ ಮತ್ತೆ ಸಿಕ್ಕುವುದಿಲ್ಲ. ಇನ್ನು ಮತ್ತೆ ಹಿಂದಕೆ ಸಿಗಬೇಕಾದರೆ ನಾಡಿದು ಮಾರ್ನೆಮಿಗೆ ಕದ್ರಿ ತಳಕ್ಕೆ ಬರಲಿ. ಒಂದು ಕೊಡ ಕಳ್ಳು ಹಿಡಿದುಕೊಂಡು ಬರಲಿ. ಅಲ್ಲಿ ಐಶ್ವರ್ಯ ಭಾಗ್ಯ ಕೊಡುತ್ತೇವೆ" ಎಂದರು.

ಅಲ್ಲಿಯ ತನಕ ಕೋಡಿ ಮೂಲೆ ಗುಡಿಸಿಕೊಂಡು ಅಡುಗೆ ಆರೋಗಣೆ ಮಾಡಿಕೊಂಡಿರಲಿ ಎಂದು ಕಾಂತನನಿಗೆ ಸಮಾಧಾನ ಹೇಳಿದರು. ಮಠ ಮಾನ್ಯಕ್ಕೆ ಹೋಗಿ ಸೇರಿಕೊಂಡರು. ದೇವರ ಪೆಟ್ಟಿಗೆ ಕೊಂಡುಹೋದರು. ದೇವರ ಪೀಠದಲ್ಲಿ ಇಟ್ಟರು. ಮೂರು ಸುತ್ತು ಬಂದರು. ಸಾಷ್ಟಾಂಗ ನಮಸ್ಕಾರ ಮಾಡಿದರು.

ಆವತ್ತಿನ ದಿನ. ಸತ್ಯದ ದಿನದಲ್ಲಿ, ಮಂಡಲ ಬರಿಕೆಯ ದೇರನ ಬಳಿಯ ದೇಯಿ ಬೈದೆಯು ಒಂದು ಕೊಡಕಳ್ಳು ಹೊತ್ತುಕೊಂಡು ಬಂದಳು. ಕೊಡದಲ್ಲಿ ಕಳ್ಳು ಸರಾಯಿ ಹೊರಿಸಿಕೊಂಡು ಬಂದಳು. ಕದ್ರೆಯ ಸ್ಥಳಕ್ಕೆ ಬಂದಳು. ಬಲದ ಕೈಯಲ್ಲಿ ರಾಮನ ಕೊಂಡೆ, ಎಡದ ಕೈಯಲ್ಲು ಯಮನ ತೂರಿ ಹಿಡಿದುಕೊಂಡು ಬಂದಳು. ಬೆಟ್ಟಿನಡ್ಕದ ಬೋರು ಪದವಿಗೆ ಬಂದಳು. ಗೋಳಿಯ ನೆರಳಲ್ಲಿ ಗಾಳಿ ಬರುವಲ್ಲಿ ಸಂತೆಯ ಪಾತ್ರೆಗಳನ್ನು ಇಳಿಸಿದಳು.

ಏಳು ರಾತ್ರಿ ಏಳು ಹಗಲು ಕಾದು ಕುಳಿತಳು. ಸೋತು ಬಸವಳಿದಳು ಬೈದೆ. ಬೋಣಿ ಸಹ ಆಗಲಿಲ್ಲ. ಕಟ್ಟಿದ ಬಾಯಿ ಬಿಡಿಸಿರಲಿಲ್ಲ. ಅಷ್ಟು ಹೊತ್ತಿಗೆ ಕದ್ರೆಯ ಮಂಜುನಾಥನ ಬಲದ ಭಾಗದಲ್ಲಿ ಪುರುಷರು ಕಂಡುಬಂದರು. ಜಗದಾನಂದ ಅಯ್ಯರು, ಜೋಗಿ ಪುರುಷರು ಕಂಡು ಬಂದರು. ಮಠ

ಮಾನ್ಯದಿಂದ ಇಳಿದು ಬಂದರು. ದೇವರ ಹಸುಬೆ ಹಿಡಿದುಕೊಂಡರು. ದೇವಿ ಕಳ್ಳು ಮಾರುವಲ್ಲಿಗೆ ಬಂದರು.

"ಯಾರು ತಾಯಿ ಸಂತೆ ಪಾತ್ರೆ ಇಟ್ಟುದು?" ಎಂದು ಕೇಳಿದರು.

"ನಾನು ದೇಯಿ ಬೈದೆತಿ".

"ನಾವು ಮಂಜುನಾಥ ದೇವರ ಚೀಲ ಹಿಡಿದುಕೊಂಡು ಬಂದಿದ್ದೇವೆ. ಮಂಜುನಾಥ ದೇವರ ಹಸುಬೆಗೆ ಆದರೂ ಕೊಡುವೆಯಾ, ಇಲ್ಲ ಕೊಡಲಿಕ್ಕಿಲ್ಲವೆ ಬೈದತಿ?" ಎಂದರು.

"ಮಂಜುನಾಥ ದೇವರ ಹಸುಬೆಗೆ ಯಾಕೆ ಕೊಡಬೇಕು? ಬೆಟ್ಟು ಅಡ್ಕದಲ್ಲಿ ಬೇರು ಪದವಿನಲ್ಲಿ ಗೋಳಿಯ ಮರವನ್ನು ಕಾವಲು ಆದುದಕ್ಕೊ? ಬೋನಿ ಸಹಿ ಮಾಡಿಲ್ಲ. ಕಟ್ಟಿದ ಬಾಯಿ ಬಿಡಿಸಲಿಕ್ಕಿಲ್ಲ. ರಾಮ ಕೊಂಡೆ ಮುಳುಗಿಸಲಿಲ್ಲ. ಬೋಣಿ ಆಗದೆ ಮಂಜುನಾಥ ದೇವರ ಜೋಳಿಗೆಗೆ ನಾನು ಕೊಡಲಿಕ್ಕಿಲ್ಲ" ಎಂದಳು.

" ಹಾಗಾದರೆ ಆಗಬಹುದು ಬೈದೆತಿ. ಬೋಣಿ ಮಾಡದಿದ್ದರೆ ನಾವು ಏನು ಮಾಡುವುದು ಮಧ್ಯಾಹ್ನದ ಹೊತ್ತು ಹಸಿವಿನ ಹೊತ್ತು ಬಂದು ಹಾಗೇ ಹಿಂದೆ ಹೋಗುವ ಕಾಲ ಬಂತು. ಆದರೆ ದೊಡ್ಡದಲ್ಲ. ನಾವು ಸತ್ಯದ ಪುರುಷರು. ಕಟ್ಟಿದ ಬಾಯಿ ಕಟ್ಟಿಯೇ ಇರಲಿ. ಬೋಣಿ ಮಾಡಲಾರೆ" ಎಂದರು. ಹೊರಟು ಹೋದರು.

ಕೆಳಗಿನ ಸಾಲು ಪೇಟೆಗೆ, ಸಂತೆ ಕಟ್ಟೆಗೆ ಹೋಗಿ ತಿರುಗಿಕೊಂಡು ಬಂದರು. ಹೊತ್ತು ಮುಳುಗುವ ಹೊತ್ತಿಗೆ ಬಂದರು.

"ಬೋಣಿ ಮಾಡಿದೆಯ ಬೈದೆತಿ. ಇನ್ನಾದರೂ ಕಾಣಿಕೆ ಕೊಡುವೆಯಾ. ನಮಗೆ ಮಟಮಾನ್ಯಕ್ಕೆ ಹೋಗುವ ಹೊತ್ತಾಯ್ತು" ಎಂದರು.

"ಪುರುಷರೆ ನಾನು ಮತ್ತೆ ಬೋಣಿಯ ಸಾಜ ಮಾಡುತ್ತೇನೆ. ಮಂಜುನಾಥ ದೇವರ ಜೋಳಿಗೆಗೆ ಮೊದಲು ಕೊಡುತ್ತೇನೆ" ಎದ್ದಳು. ಕೊಡದ ಬಾಯಿ ತೆಗೆದಳು. ಅರ್ಧ ಕಂದೆಲಿನ ಕಲ್ಲನ್ನು ಮಂಜುನಾಥ ದೇವರ ಮಂಜಕ್ಕೆ ಕೊಟ್ಟಳು. ಕಡೆ ಕಣ್ಣ ನೋಡಿ ದುಃಖ ಬಿಟ್ಟಳು.

"ಮಂಜುನಾಥ ದೇವರ ಜೋಳಿಗೆಗೆ ಕೊಟ್ಟು ದುಃಖ ಮಾಡಿದೆಯಾ? ನಾವು ತೆಗೆದುಕೊಳ್ಳಲಿಕ್ಕಿಲ್ಲ. ಹರುಷದಲ್ಲಿ ಕೊಟ್ಟರೆ ನಾವು ತೆಗೆದುಕೊಳ್ಳುತ್ತೇವೆ".

"ಪುರುಷರೆ ನಾನು ಮಂಜುನಾಥ ದೇವರಿಗೆ ಕೊಟ್ಟ ಕಾಣಿಕೆಗಲ್ಲ ದುಃಖಪಟ್ಟುದು. ಅರ್ಧ

ಕಂದೆಲು ಕಳ್ಳನ್ನು ಮಾರಿ ನಾನು ಮಕ್ಕಳು ಮರಿಗಳನ್ನು ಸಾಕುವುದು ಹೇಗೆಂದು ದುಃಖ ಪಟ್ಟುದು.

"ಇದೇ ಕಳ್ಳನ್ನು ಏಳು ರಾತ್ರಿ ಎಂಟು ಹಗಲು ಮಾರು ಬೈದೆ".

"ಏನನ್ನು ಮಾರುವುದು. ಮೂಸವುತ್ತ ಕುಳ್ಳಿರುವುದೇ?"

"ಹೊಳೆಯ ಬದಿಗೆ ಹೋಗು. ತಲೆಗೆ ಮೈಗೆ ಸ್ನಾನಮಾಡು. ಮುಳುಗಿ ಮೇಲೆ ಬಾ. ಒಂದು ಹಿಡಿ ಬಿಳಿ ಉರಿಕ್ಕಿ ಕಿತ್ತು ತಾ" ಎಂದರು.

ಮತ್ತೆ ಆಚಾರಿಗಳನ್ನು ಕರೆಸಿದರು. ತೇಗಿನ ಮರ ಕಡಿಸಿದರು. ಮೂರು ಕಾಲಿನ ಮುಂಡು ಮುಕ್ಕಾಲೆ ಜೋಡಿಸಿದರು. ದೇವಿ ತಂದ ಉರಿಕ್ಕಿಯ ಸಿಂಬಿ ಮಾಡಿದರು. ದೇವಿಯನ್ನು ಮೂಡು ಮುಖ ಮಾಡಿ ನಿಲ್ಲಿಸಿದರು. ಸೂರ್ಯ ಬೊಟ್ಟು ಹಾಕಿಸಿದರು. ಪಡು ದಿಕ್ಕಿಗೆ ಮುಖ ಮಾಡಿ ನಿಲ್ಲಿಸಿದರು. ಚಂದ್ರ ಬೊಟ್ಟು ಹಾಕಿಸಿದರು. ಕಂದೆಲ್ ತೆಗೆದು ಸಿಂಬಿಯ ಮೇಲೆ ಇಡಿಸಿದರು. ರಾಮ ಕೊಂಡೆ ಲಕ್ಷ್ಮಣ ತೂರಿ ಕೊಟ್ಟರು. ಹನ್ನೆರಡು ಮೊಳದ ಜೋಳಿಗೆಗೆ ಕಯ್ ಹಾಕಿ ಐದು ಕಾಳು ಅಕ್ಕಿ ತೆಗೆದರು. ಮಂತ್ರಿಸಿ ಕಂದೆಲಿಗೆ ಹಾಕಿದರು. ಮಂಜುನಾಥ ದೇವರನ್ನು ಸ್ಮರಿಸಿ ಒಂದು ವರ ಕೊಟ್ಟರು.

"ಕಡಲಿನಲ್ಲಿ ರಾಮ ತೆರೆ ಉಕ್ಕಿದಂತೆ ಚಂದ ಉಕ್ಕ ಬೇಕು. ಗದ್ದೆಯ ಕಾಡು ಕಡಿದು ನೀರಿನ ತೊರೆ ಒಡ್ಡಿದಂತೆ ಸೇರಬೇಕು. ಹೊಳೆಯ ನೆರೆ ಏರಿದಂತೆ ಏರಬೇಕು. ಒಲೆಯಲ್ಲಿ ಹಾಲು ಉಕ್ಕಿದಂತೆ ಉಕ್ಕಬೇಕು. ಮಾರಿದಷ್ಟು ಮುಗಿಯಬಾರದು. ಅಳತೆ ಮಾಡಿದಷ್ಟು ಕಡಿಮೆಯಾಗಬಾರದು. ಬಾಯಾರಿಕೆ ಆಸರು ತಣಿಸಿಕೊಳ್ಳಲು ಬಿಡುವು ಸಿಗಬಾರದು. ಹೊಟ್ಟೆಯ ಹಸಿವು, ಕಣ್ಣಿನ ನಿದ್ರೆ ಇಲ್ಲದೆ ಆಗಲಿ.ಬಾಯಿ ವಾಸನೆಗೆ ವೀಳ್ಯ ಹಾಕಲು ಸಮಯ ಸಿಗಬಾರದು" ಎಂದು ವರ ಕೊಟ್ಟರು.

"ಮಾರು ಬೈದೆತಿ, ಮಾರಿ ಸೋತ ಕಾಲಕ್ಕೆ ನಮ್ಮನ್ನು ನೆನಸು" ಎಂದು ಹೇಳಿ ಮಠಕ್ಕೆ ಹೋದರು.

ಬೈದೆತಿ ಮಾರುತ್ತಾಳೆ. ಮಾರಾಟ ಮಾಡಿದಷ್ಟೂ ಮುಗಿಯುವುದಿಲ್ಲ. ಅಳತೆ ಮಾಡಿದಷ್ಟು ತಗ್ಗುವುದಿಲ್ಲ. ಹಸಿವು ಬಾಯಾರಿಕೆ ತಣಿಸಿಕೊಳ್ಳಲು ಬಿಡುವು ಸಿಗುವುದಿಲ್ಲ. ಹಾಲು ಉಕ್ಕುತ್ತಾ ಹೋದಂತೆ ಉಕ್ಕುತ್ತದೆ. ಗದ್ದೆಗೆ ಕಟ್ಟಿದ ನೀರು ಉಕ್ಕಿದಂತೆ ಉಕ್ಕಿತು. ಏಳು ರಾತ್ರಿ ಎಂಟು ಹಗಲು ಮಾರಿದಳು. ಬಲ ಬದಿಯಲ್ಲಿ ಅಕ್ಕಿ ಭತ್ತದ ಏಳು ರಾಶಿ ಕಟ್ಟಿದಳು. ಎಡ ಬದಿಗೆ ಎಳು ರಾಶಿ ದುಡ್ಡು ಹಣದ ಕಜಾನೆ ಕಟ್ಟಿದಳು. ಏಳು ಹೋಗಿ ಎಂಟರಂದು ಜಾಮ ಹೊತ್ತಿಗೆ ದಾತು ಕೆಟ್ಟು ಮುಂಡು ಮುಕ್ಕಳಿಗೆಯ ಅಡಿಗೆ ಬಿದ್ದಳು. ಕುಡಿಯಲು ಬಂದ ಜನರು ಎಬ್ಬಿಸಿ ಬಾಯಾರಿಕೆ ಕೊಟ್ಟರು. ತಲೆಗೆ ನೀರು ತಟ್ಟಿ ಬೋದ ಬರಿಸಿದರು.

"ಏನಾಯಿತು ದೇಯಿ?" ಎಂದು ಕೇಳಿದರು.

"ಕದ್ರಿ ತಳದ ಜೋಗದ ಪುರುಷರು ಒಂದು ವರಕೊಟ್ಟು ಹೋಗಿದ್ದಾರೆ. ಅವರು ಮತ್ತೆ ಬರಲಿಲ್ಲ.ಬರುತ್ತಿದ್ದರೆ ಮಾಯೆಯ ಕಳ್ಳನ್ನು ಮಾಯಕ ಮಾಡಿಸುತ್ತಿದ್ದೆ".

ಅಷ್ಟು ಹೊತ್ತಿಗೆ ಮಂಜುನಾಥ ದೇವರು, ಜೋಗಿ ಪುರುಷರಿಗೆ ಸ್ವಪ್ನದಲ್ಲಿ ಬಂದು ಹೇಳಿದರು.

"ದೇವಿಗೆ ವರ ಕೊಟ್ಟು ಹೋಗಿದ್ದೀರಿ. ಅವಳು ಸೋತಿದ್ದಾಳೆ, ಸೊರಗಿದ್ದಾಳೆ. ದಾತು ಕೆಟ್ಟು, ಬೋದ ತಪ್ಪಿ, ಮುಂಡು ಮುಕ್ಕಲೆಯ ಅಡಿಗೆ ಬಿದ್ದಿದ್ದಾಳೆ.

ಕಣ್ಣಿಗೆ ಸ್ವಪ್ನಕಟ್ಟಿ ಮರುದಿನ ಬೆಳಗ್ಗೆ ಎದ್ದರು. ತಮ್ಮಂದಿರನ್ನು ಕರೆದುಕೊಂಡು ದೇವರ ಕೆರೆಗೆ ಹೋದರು. ಕೈಕಾಲು, ಮುಖ ಒರಸಿಕೊಡರು. ನಾಮ ಎಳೆದುಕೊಂಡಡರು. ದೌರಂಗಿ ಹಾಕಿಕೊಂಡರು. ಕತ್ತರಿ ಮುಂಡಾಸು ಕಟ್ಟಿಕೊಂಡರು. ರಾಮ ವಾಕ್ಯ ಓದಿಕೊಂಡು, ಶ್ರೀ ನಾರಾಯಣ ಪದ ಹೇಳಿಕೊಂಡು ಕೆಳಗಿನ ಸಾಲು ಪೇಟೆಗೆ ಬಂದರು. ಸಂತೆ ಕಟ್ಟೆ ತಿರುಗಿಕೊಂಡು ಸಾಯಂಕಾಲ ಮೇಗಿನ ಸಾಲಿಗೆ ಬರುವಾಗ ದೂರದಲ್ಲಿ ದೇವಿ ನೋಡಿದಳು. ಹತ್ತು ಬೆರಳು ಜೋಡಿಸಿ ಶರಣೆಂದಳು.

"ಏನಾಯಿತು ದೇವಿ? ಕುಡಿದೆಯ? ಮಾರಲಿಲ್ಲವೆ? ಮೂಸಿಸಿಕೊಂಡು ಚೆಲ್ಲಿದೆಯಾ?"

"ಪುರುಷರೇ ಸೋತೆ ನಾನು. ಬದುಕುವುದಿಲ್ಲ ಇದರಲ್ಲಿ. ಬಾಳುವುದಿಲ್ಲ ನಾನು. ನಿಮ್ಮ ಮಾಯೆಯ ಕಳ್ಳನ್ನು ಮಾಯಕ ಮಾಡಿ. ಜೋಗದ ಕಳ್ಳನ್ನು ಜೋಗದಲ್ಲಿ ಇಡಿರಿ" ಎಂದಳು.

"ಅಷ್ಟು ಸುಲಭದಲ್ಲಿ ಇಲ್ಲ ನೋಡು. ಹೆಚ್ಚು ಮಾಡುವುದು ನಮ್ಮ ಇಚ್ಛೆಯಲ್ಲ ಕಡಿಮೆ ಮಾಡುವುದು. ನಮ್ಮ ಇಚ್ಛೆಯಲ್ಲ. ಕದ್ರಿ ಸ್ಥಳದ ಕಳ್ಳು ಕುಡಿದ ದೋಷಕ್ಕೆ ಯಾವ ಹರಿಕೆ ಸಲ್ಲಿಸುತ್ತಿ ಬೈದೆತಿ?"

"ಯಾವ ಹರಿಕೆ ಸಲ್ಲಿಸಬೇಕು?"

"ಹಾಗಿದ್ದರೆ ಮಂಜುನಾಥ ದೇವರು ಬುದ್ಧಿಕೊಟ್ಟ, ಹರಿಕೆ ತುಂಬಿಸು".

"ನನ್ನಲ್ಲಿ ಬಲದ ಮಗ್ಗುಲಲ್ಲಿ ಅಕ್ಕಿ ಭತ್ತ ತುಂಬಿದ ಏಳು ರಾಶಿಗಳಿವೆ. ನಡುವಿನ ರಾಶಿಯನ್ನು ಬಿಚ್ಚಿಸಿ, ಕಳಸೆ ಒಂಟೆಯಲ್ಲಿ ಹೇರಿಸುತ್ತೇನೆ. ಮಂಜುನಾಥ ದೇವರ ಭಂಡಾರಕ್ಕೆ ಹಾಕಿಸುತ್ತೇನೆ. ಎಡದ ಮಗ್ಗುಲಲ್ಲಿ ಏಳುರಾಶಿ ದುಡ್ಡು ಹಣದ ಕಣಜದಲ್ಲಿ ನಡುವಿನ ಕಣಜವನ್ನು ತೆರವುಗೊಳಿಸುತ್ತೇನೆ. ಕಳಸೆ ಕೋಲಿನಲ್ಲಿ ಅಳತೆ ಮಾಡಿಸುತ್ತೇನೆ. ಗೆರಸೆಯಲ್ಲಿತುಂಬಿಸುತ್ತೇನೆ. ಆಳುಗಳನ್ನು ಹಿಡಿದು ಕಂಚುಗಾರ ಕೊಟ್ಟ್ಯಕ್ಕೆ ಹೋಗುತ್ತೇನೆ. ಬಂಗಾರದಲ್ಲಿ ಕೆಲಸ ಮಾಡಿಸುತ್ತೇನೆ. ದೀಪಕ್ಕೆ ಕಂಚಿನ ದೀಪಾವಳಿ ನೆಡಿಸುತ್ತೇನೆ. ಕಂಚಿನ ಕೊಳವೆ ಇಳಿಸುತ್ತೇನೆ. ತಾಮ್ರದ ತಗಡು

ಮುಚ್ಚಿಸುತ್ತೇನೆ. ಏಳು ದಿನದ ಬಲಿ ಉತ್ಸವ ಕೊಡಿಸುತ್ತೇನೆ. ಮುತ್ತಿನಲ್ಲಿ ಮುಗುಳಿ ಇಡಿಸುತ್ತೇನೆ. ಬಂಗಾರದ ಕಲಶ ಏರಿಸುತ್ತೇನೆ. ಊರನ್ನು ಕೂಡಿ ಹಾಕುತ್ತೇನೆ" ಎಂದಳು.

"ಹಾಗಿದ್ದರೆ ಆಗಬಹುದು. ಕಂದೆಲು ತೆಗೆದು ಕೆಳಗೆ ಇಡು. ರಾಮ ಕೊಂಡೆ, ಲಕ್ಷ್ಮಣ ತೂರಿ ಕಯ್ ಬಿಡು. ಮುಂಡು ಮುಕ್ಕಲೆಯಿಂದ ಏಳು" ಎಂದರು. ಮೂಡುಮುಖ ಮಾಡಿ ಸೂರ್ಯ ಬೊಟ್ಟು ಅಳಿಸಿದರು. ಪಡು ದಿಕ್ಕಿಗೆ ಮುಖ ಮಾಡಿ ಚಂದ್ರ ನಾಮ ಅಳಿಸಿದರು. ಅರ್ಧಕಂದೆಲಿನಲ್ಲಿ ಮೂರು ಕುಪ್ಪಿ ಕಳ್ಳು ಬಂದು ನಿಂತಿತು.

ಮರುದಿನ ಬೆಳಗ್ಗೆ ಎದ್ದಳು. ದೇವರ ಕೆರೆಗೆ ಹೋದಳು. ಕೈಕಾಲು, ಮುಖ ತೊಳೆದಳು. ಮಂಜುನಾಥ ದೇವರ ಗುಂಡದ ಬಳಿಗೆ ಬಂದು ನಿಂತಿಳು. ಹತ್ತು ಬೆರಳು ಸೇರಿಸಿ ಶರಣು ಎಂದಳು. ದೇವರ ಅಪ್ಪಣೆ ಪಡಕೊಂಡಳು. ಬಲದ ಬದಿಯ ಏಳು ರಾಶಿ ಸಿರಿ ತುಪ್ಪೆಯಲ್ಲಿ ನಡುವಿನ ತುಪ್ಪೆಯನ್ನು ಬಿಚ್ಚಿಸಿದಳು. ಕಲಸೆ ಕೋಲಿನಲ್ಲಿ ಅಳತೆ ಮಾಡಿಸಿದಳು. ಆನೆಯಲ್ಲಿ ಎಳೆಯಿಸಿದಳು. ಒಂಟೆಯಲ್ಲಿ ಹೇರಿಸಿದಳು. ಮಂಜುನಾಥ ದೇವರ ಭಂಡಾರಕ್ಕೆ ಒಪ್ಪಿಸಿದಳು. ಎಡದ ದುಡ್ಡು ಹಣದ ಏಳು ರಾಶಿ ಕಣಜದಲ್ಲಿ ನಡುವಿನ ರಾಶಿಯನ್ನು ಬಿಚ್ಚಿಸಿದಳು. ಕಲಸೆ ಕೋಲಿನಲ್ಲಿ ಅಳತೆ ಮಾಡಿಸಿದಳು. ಬುಟ್ಟಿಯಲ್ಲಿ ತುಂಬಿಸಿದಳು. ಜನ ಮಂದೆಯಲ್ಲಿ ಕಂಚುಗಾರನ ಕೊಟ್ಟಿಗೆಗೆ ಹೊರಿಸಿದಳು. ಕಂಚು ತಾಮ್ರದ ಕೆಲಸ ಮಾಡಿಸಿದಳು. ಸೊನೆಗಾರರ ಕೊಟ್ಟಿಗೆಗೆ ಹೋದಳು. ಸ್ವರ್ಣದ ಕೆಲಸ ಮಾಡಿಸಿದಳು. ಕಂಚಿನ ದೀಪಾವಳಿ ನಡೆಸಿದಳು. ಕಂಚಿನ ಕೊಳವೆ ಇಳಿಸಿದಳು. ತಾಮ್ರದ ತಗಡು ಮುಚ್ಚಿಸಿದಳು. ಮಂಜುನಾಥ ದೇವರ ಒಂದು ಅಂಕಣದ ಜಲಕದ ಕೆರೆಯನ್ನುಏಳು ಅಂಕಣ ಕಟ್ಟಿಸಿದಳು. ಕಂಕಣವನ್ನು ತೆಗೆದಳು. ಮಂಜುನಾಥ ದೇವರ ಭಂಡಾರಕ್ಕೆ ಹಿಡಿದುಕೊಂಡಳು.

ಉದ್ದಲ ಗುಡ್ಡೆಗೆ ಹೋದಳು. ಇಸವರು ಆಚಾರಿ ಬಲವರು ಆಚಾರಿಗಳನ್ನು ಕರೆದೊಯ್ದಳು. ರಾಮ ಭೀಮ ಎಂಬ ಬಿಳಿಯ ಕೇಪ್ಪುಳವಿನ ಮರವನ್ನು ನೋಡಿದಳು.

"ನಾನು ಸತ್ಯದ ಮಗಳು ಹೌದಾದರೆ ಮೂರೇ ಗಡಿಯಲ್ಲಿ ಮರ ಉರುಳಬೇಕು" ಎಂದಳು, ಮೂರು ಗಡಿಯಲ್ಲಿ ಮರ ಉರುಳಿತು. ಅರ್ವತ್ತು ತುಂಡು ಕಡಿಸಿದಳು. ಮೂವತ್ತು ತುಂಡು ಸೀಳಿಸಿದಳು. ನಡು ತುಂಡಿನಿಂದ ಕಡೆಚ್ಚಿಲಿನ ಕೆಲಸ ಮಾಡಿಸಿದಳು. ನಾಜೂಕಿನ ಕೆಲಸ ಮಾಡಿಸಿ ಅಲಂಕಾರ ಸಿಂಗಾರ ಮಾಡಿಸಿದಳು. ಆನೆಯಲ್ಲಿ ಎಳೆಸಿ, ಒಂಟೆಯಲ್ಲಿ ಹೇರಿಸಿದಳು.

ಶಕುನದ ಭೇರಿ, ಸ್ವರ್ಣದ ಕೊಂಬು, ಸರ್ವ ಬಿರುದುಗಳಲ್ಲಿ ಎಳೆಸಿಕೊಂಡು ಬಂದಳು. ಮಂಜುನಾಥ ದೇವರ ಎದುರು ಧ್ವಜಮರವನ್ನು ನೆಡಿಸಿದಳು. ತೆಂಕು ರಾಜ್ಯ ಮಂಗಳೂರು ಸೀಮೆಗೆ ಹೇಳಿಸಿದಳು. ಊರನ್ನು ಕೂಡಿ ಹಾಕಿದಳು. ಮುತ್ತಿನಲ್ಲಿ ಮುಗುಳಿ ಕೂರಿಸಿದಳು. ಬಂಗಾರದ ಕಲಶ ಏರಿಸಿದಳು. ಏಳು ದಿನದ ಬಲಿ ಉತ್ಸವ ಕೊಡಿಸಿದಳು. ಬೆಳಗ್ಗಿನ ಉತ್ಸವಕ್ಕೆ ಅರ್ವತ್ತು ಬೊಂಡದ,

ಬೊಂಡ ಅಭಿಷೇಕ ಮಾಡಿಸಿದಳು. ಮಧ್ಯಾಹ್ನದ ಪೂಜೆಗೆ ಲಕ್ಷ ತೆಂಗಿನಕಾಯಿ ಹಣ್ಣು ಕಾಯಿ ಮಾಡಿಸಿದಳು. ಸಂಜೆಯ ಹೂವಿನ ಪೂಜೆ ಕೊಡುವಾಗ "ಒಂದು ಹರಿಕೆ ಬಾಕಿ ಆಯಿತು" ಅಂದರು.

"ಎಂತಹುದು ಪುರುಷರೆ?"

"ದೇವಾಲ್ಯದ ನಿನ್ನ ಹರಕೆ ಪೂರ್ತಿಯಾಯಿತು. ನೀನು ನೆಡಿಸಿದ ದೀಪಾವಳಿಯ ಜಲಕ ಮಾಡಬೇಕು. ನಿನ್ನ ಕುಲಕ್ಕೆ ನಿನ್ನ ಜಾತಿಗೆ ಹೆಸರು ಬರಬೇಕು. ಜಾತಿಗೆ ವಿವರ ತಿಳಿಸಬೇಕು" ಎಂದರು.

ದೇವರ ಅಪ್ಪಣೆ ತೆಗೆದುಕೊಂಡಳು. ಪುರುಷರ ನುಡಿ ತೆಗೆದುಕೊಂಡಳು. ಪೆಟ್ಟಿಗೆಯಲ್ಲಿ ಇದ್ದ ಪಿಂಡಿಯಲ್ಲಿ ಉತ್ತಮವಾದ ಪಿಂಡಿ ತೆಗೆದಳು. ಅರ್ವತ್ತು ಮೊಳದಪಾಲೆ ಪಟ್ಟೆ ಸೀರೆಯನ್ನು ತೆಗೆದಳು. ಮೂವತ್ತು ಮೊಳಕ್ಕೆ ಎರಡು ತುಂಡು ಮಾಡಿದಳು. ಎರಡು ತುಂಡು ಎರಡು ಬತ್ತಿ ಮಾಡಿಸಿ ಗಂಡನಲ್ಲಿ ಕೊಟ್ಟಳು.

"ಕಂಚಿ ದೀಪ ಜಲಕ ಮಾಡಬೇಕು. ನಮ್ಮ ಕುಲಕ್ಕೆ ನಮ್ಮ ಜಾತಿಗೆ ಹೆಸರು ಬರಬೇಕು. ಮುಂದಕ್ಕೆ ನಮ್ಮ ಕಷ್ಟ ದೂರವಾಗಬೇಕು" ಎಂದಳು.

ಕಾಂತನ ಎದ್ದ, ಸುದ್ದ ಮುದ್ರಿಕೆಯಾದ. ಮಿಂದು ಶೃಂಗಾರವಾದ. ಬತ್ತಿ ಹಿಡಿದುಕೊಂಡು ಮಂಜುನಾಥ ದೇವರ ಗುಂಡದ ಎದುರು ಬಂದ. ಹತ್ತು ಬೆರಳು ಶರಣು ಎಂದ. ದೇವರ ಅಪ್ಪಣೆ ತೆಗೆದುಕೊಂಡ. ಪುರುಷರ ನುಡಿ ತೆಗೆದುಕೊಂಡ. ಕಂಚಿ ದೀಪದ ಎದುರು ಬುಡದಲ್ಲಿ ಹೋಗಿ ನಿಂತ. ದೀಪದ ತುದಿಯಿಂದ ಬುಡದ ತನಕ ನೋಡಿದ.

"ನನಗೆ ಕಂಚಿ ದೀಪ ನೋಡಿದರೆ ಜೀವ ಭಯ ಉಂಟಾಗುತ್ತದೆ. ಮೂವತ್ತು ಕೋಲಿನ ದೀಪ ನೋಡುವಾಗ ಭಾರ ಭಯ ಆಗುತ್ತದೆ" ಎಂದ.

"ಕೆಳಗಿನಿಂದ ಉರಿಸಿಕೊಂಡು ಹೋಗಬೇಡ. ಮೇಲಿಂದ ಉರಿಸಿಕೊಂಡು ಕೆಳಗೆ ಬಾ ಕಾಂತನ" ಎನ್ನುವಾಗ.

"ಕೇಳಿದಿರೆ ಪುರುಷರೆ, ಇಂದು ತನಕ ನಮ್ಮನ್ನು ಸಾಕಿದಿರಿ. ಸಣ್ಣ ಪ್ರಾಯದ ಮಕ್ಕಳನ್ನು ಸಾಕಿ ಸಲಹಿ ಬೆಳೆಸಿದಿರಿ. ಪೂಪೂಜನೆ ಉಪದೇಶ ಕೊಟ್ಟಿರಿ. ಐಶ್ವರ್ಯ ಭಾಗ್ಯ ಕೊಟ್ಟುದು ಹೌದು. ಮದುವೆ ಮೈಸಿರಿ ಮಾಡಿದಿದೂ ಹೌದು. ಇಂದು ತನಕ ಹೇಳಿದಂತೆ ನಾವು ಕೇಳಿದುದೂ ಹೌದು. ಇಂದು ಮಂಜುನಾಥ ದೇವರ ಬುದ್ದಿ ಕೊಟ್ಟ ಹಾಗೆ ನಾನು ಮಾಡುತ್ತೇನೆ" ಎಂದ.

ಕೆಳಗಿನಿಂದ ಮೇಲಿನ ತನಕ ಉರಿಸಿಕೊಂಡು ಹೋಗುತ್ತಾನೆ.

ಸೊಡರಿನ ಏರಿ ಬೀಸುತ್ತದೆ. ನಿಲ್ಲಲು ನೆಲೆ ಸಿಗುವುದಿಲ್ಲ. ಇಳಿಯಲು ದಾರಿ ಇರಲಿಲ್ಲ. ಕೆಳಗಿನಿಂದ ಬೆಂಕಿ ಉರಿಯುವಾಗ "ಅಗ್ನಿಯಲ್ಲಿ ಬಿದ್ದು ಸಾಯುವ ಕಾಲ ಬಂತು ನನಗೆ. ಅಂದು

ಭೀಮನ ಕತ್ತಿಯಲ್ಲಿ ಹೆಸರು ಇಲ್ಲದೆ ಆಗುತ್ತಿತ್ತು. ಇಂದು ಬೆಂಕಿಯಲ್ಲಿ ಸುಟ್ಟು ಸಾಯುವ ಕಾಲ ಬಂತು".

"ಕೇಳಿದೆಯಾ ಕಾಂತನ ನಾವು ಹೇಳಿದುದೇನು? ನೀನು ಮಾಡಿದುದೇನು? ನಿನ್ನನ್ನು ಬೆಂಕಿಯಲ್ಲಿ ಸುಡಲು ಬಿಡುವುದಿಲ್ಲ. ನಾವು ಮಂಜುನಾಥ ದೇವರ ಹಚ್ಚಡ ಸೆರಗು ಒಡ್ಡಿ ಹಿಡಿಯುತ್ತೇವೆ. ಅದಕ್ಕೆ ಹಾರು ಕಾಂತನ" ಎಂದರು.

"ನನಗೆ ಜೀವದಲ್ಲಿ ಬಹಳ ಭಯ ಆಗುತ್ತದೆ. ದೇವಿ ತೋಡಿಸಿದ ಏಳು ಅಂಕಣದ ಕೆರೆಯಲ್ಲಿ ಒಂದು ಅಂಕಣವನ್ನು ಬಿಟ್ಟು ಕೊಡಿರಿ" ಎಂದಾಗ.

"ಕುಶಿ ಬಂದ ಹಾಗೆ ಹಾರು ಕಾಂತನ" ಎಂದರು. ಅಂದಿನ ದಿನದಲ್ಲಿ ಏಳು ಅದೆಯನ್ನು ಬಿಟ್ಟು, ಕೀಳು ಅದೆಗೆ ಎಂಜಲು ತುಪ್ಪೆಗೆ ಹಾರಿದ. ಮೂರು ಸಾರಿ ಮುಳುಗಿ ಮೂರು ಸಾರಿ ಕಾಣಿಸಿಕೊಂಡು, ಅಲ್ಲಿಂದ ಕೊಡಿ ಮರದಲ್ಲಿಗೆ ಬಂದು ಮೂರು ಅರ್ಭಟೆ ಕೊಡುತ್ತಾನೆ. ಪುರುಷರು ಓಡಿಕೊಂಡು ಬಂದು

"ಏನಾಯಿತು ಕಾಂತನ ಎಲ್ಲಿ ತಾಗಿತು" ಎಂದು ಕೇಳಿದರು.

"ನನಗೆ ಏನೂ ತಾಗಿಲ್ಲ. ಊರವರು ಅಳುತ್ತಿದ್ದಾರೆ. ಇಲ್ಲಿಯ ವರ ತಿರುಪತಿಯಲ್ಲಿ ನಾನು ಕೊಡುತ್ತೇನೆ. ತಿರುಪತಿ ದೇವರ ಬೆಂಬಲಕ್ಕೆ ಸ್ವರ್ಣಗೋಪುರ ಕಟ್ಟಿಸುತ್ತೇನೆ ನಾನು. ರಕ್ಷಕ ದೈವವೆಂದು ಹೇಳಿಸುತ್ತೇನೆ ನಾನು" ಎಂದು ಹೇಳಿ ಮಾಯವಾದ. "ನಾಲ್ಕು ಊರು ನಾಲ್ಕು ದೇಶ, ನಾಲ್ಕು ಗಂಗೆಯ ಒಳಗೆ ತಿರುಗಿಕೊಂಡು ಬರುವಾಗ ನಮ್ಮ ಹೆಸರು ಹೇಳಿಕೊಂಡು ಬನ್ನಿ" ಎಂದು ಹೇಳಿ ಮಾಯಕವಾದ. ತಿರುಪತಿಯಲ್ಲಿ ಹೋಗಿ ಕಾಲಭೈರವನಾಗಿ ನಿಂತಿದ್ದಾನೆ. ದೇವಿ ಕದ್ರೆಯಲ್ಲಿ ಮಾಯಕ ಆಗಿ ನಿಂತಿದ್ದಾಳೆ. ಕಾಲಭದ್ರ ದೇವಿಯಾಗಿ ನಿಂತಿದ್ದಾಳೆ.

ವಿ.ಸೂ. : ಬೊಮ್ಮರಬೆಟ್ಟು ಅಪ್ಪು ಜೋಗಿ ಹಿರಿಯಡ್ಕ ಇವರು ಹೇಳಿದುದನ್ನು ತಾ. 27-12-1982ರಲ್ಲಿ ಸಂಗ್ರಹ ಮಾಡಿದುದನ್ನು ತುಳುವಿನಲ್ಲಿ ಕತೆಯಾಗಿ ಕೊಟ್ಟಿದ್ದೆ. ಅದನ್ನು ಈಗ ಇಲ್ಲಿ ಕನ್ನಡದಲ್ಲಿ ತರ್ಜುಮೆ ಮಾಡಿ ಕೊಟ್ಟಿರುತ್ತೇನೆ.

✍ **ಕುದ್ಕಾಡಿ ವಿಶ್ವನಾಥ ರೈ**
ವಿಶ್ವನಾಥ ಕಲಾನಿಕೇತನ
ಪುತ್ತೂರು - 574313

●

ಜೋಕ್ಲೆಗಾದ್ ತುಳು ಕತೆಕ್ಕುಲು

1.	ಕೋಟಿ- ಚೆನ್ನಯ	:	ಡಾ. ವಾಮನ ನಂದಾವರ
2.	ಅಕ್ಕೆರಸು ಸಿರಿ	:	ಎ. ವಿ. ನಾವಡ
3.	ಕೋಡ್ದಬ್ಬು	:	ಡಾ. ಸುಶೀಲಾ ಉಪಾಧ್ಯಾಯ
4.	ಪರತಿ ಮಂಗನೆ	:	ಕೆ. ಲೀಲಾವತಿ
5.	ಪುಳ್ಳೂರ ಬಾಚೆ	:	ವೆಂಕಟರಾಜ ಪುಣಿಂಚತ್ತಾಯ
6.	ಅಬ್ಬಗೆ ದಾರಗೆ	:	ಕೆ.ಜೆ. ಶೆಟ್ಟಿ ಕಂಡಂದಲೆ
7.	ಮೂಂಕು ಸಂಬಳೊ	:	ಡಾ. ಕೆ. ಚಿನ್ನಪ್ಪ ಗೌಡ
8.	ಮಗೆ ಬರವು ಕಲ್ತೆ	:	ಕನರಾಡಿ ವಾದಿರಾಜ ಭಟ್
9.	ಮಾಯಾಂದಾಳ್	:	ಯಶವಂತಿ ಸುವರ್ಣ
10.	ಕಲ್ಲುರ್ಟಿ ಕಲ್ಕುಡೆ	:	ಅಮೃತ ಸೋಮೇಶ್ವರ
11.	ಬನ್ನಾಲ್	:	ಕ್ಯಾಥರಿನ್ ರಾಡ್ರಿಗಸ್
12.	ಮಾಮಿ ಮರ್ಮಲ್	:	ಡಾ. ಗಣನಾಥ ಶೆಟ್ಟಿ ಎಕ್ಕಾರು
13.	ಜೋಗಿ ಪುರುಸೆರ್	:	ಕುದ್ಕಾಡಿ ವಿಶ್ವನಾಥ ರೈ
14.	ಅಗೋಳಿ ಮಂಜನೆ	:	ಗಣೇಶ ಅಮೀನ್ ಸಂಕಮಾರ್
15.	ಕಣ್ಣ್‌ಡ್ ತೂವಂದಿನ ಕೆಬಿಟ್ ಕೇನಂದಿನ	:	ಕೆ. ಆರ್. ರೈ
16.	ನಾಗಸಿರಿ	:	ಅನಂತರಾಮ ಬಂಗಾಡಿ
17.	ಮಾಯೊದ ಪೊಣ್ಣು	:	ಡಿ. ಯದುಪತಿ ಗೌಡ
18.	ಮುಡಿಪ್ಪೆರಾವಂದಿ ಮಲ್ಲಿಗೆ	:	ಎನ್. ಕೊಯಿರಾ ಬಾಳೆಪುಣಿ
19.	ಅಪ್ಪೊದಡ್ಯೆ	:	ಮುದ್ದು ಮೂಡುಬೆಳ್ಳೆ
20.	ಭೂತಾಳ ಪಾಂಡ್ಯೆ	:	ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್